# ಜುಲುಮೆಯನ್ನು ಕೊನೆಗಾಣಿಸುವ ತಪಶೀಲ ಪಟ್ಟಿ

## The Checklist for Ending Tyranny

**Peter Ackerman and Hardy Merriman**

From the book: 'Is Authoritarianism Staging a Comeback?'
Editors: Mathew Burrows and Maria J. Stephan
The Atlantic Council, Washington D.C. — 2015
Translation: April 2018

© 2014 Peter Ackerman and Hardy Merriman

# ಜುಲುಮೆಯನ್ನು ಕೊನೆಗಾಣಿಸುವ ತಪಶೀಲ ಪಟ್ಟಿ

## ಪೀಟರ್ ಅಕ್ಕರ್ಮೆನ್ ಮತ್ತು ಹಾರ್ಡಿ ಮೆರ್ರಿಮೆನ್ ರವರಿಂದ

ಇಂದು ಅತ್ಯಂತ ಭೀಕರವಾದ ಬಡಿದಾಟಗಳು ರಾಜ್ಯಗಳ ನಡುವೆಯಲ್ಲ. ಆದರೆ ರಾಜ್ಯದ ಒಳಗೆಯೆ ನಡೆಯುತ್ತದೆ. ಅವರು ಹಿಂಸಿಸುವ ಪ್ರಜೆಗಳ ವಿರುದ್ಧ ನಿರಂಕುಶಪ್ರಭುಗಳನ್ನು ಎತ್ತಿಕಟ್ಟುವುದಾಗಿದೆ. ಹಿಂಸೆಗೊಳಗಾದ ಜನಾಂಗಗಳಿಗೆ ಇರಡೆ ಆಯ್ಕೆಗಳು ಇರುತ್ತವೆಯೆಂದು ನಂಬಲಾಗಿದೆಃ ಮುಂದೆ ಒಂದು ದಿನ ಅದು ಸುಧಾರಣೆಯಾಗುತ್ತದೆಂದು ನಂಬಿ ಜುಲುಮೆಯನ್ನು ಒಪ್ಪುವುದು ಅಥವಾ ಸ್ವತಂತ್ರವನ್ನು ಪಡೆಯಲು ಕ್ರೂರವಾದ ದಂಗೆಯನ್ನು ಎಬ್ಬಿಸುವುದು. ಈ ಸೀಮಿತ ದೃಷ್ಟಿಕೋನವನ್ನು ಖಂಡಿಸುವಂತೆ ವಾಸ್ತವದಲ್ಲಿ ನಾಗರೀಕ ಪ್ರತಿಭಟನಾ ಅಭಿಯಾನಗಳು (ಕೆಲವೊಮ್ಮೆ "ಪ್ರಜಾ ಶಕ್ತಿ" ಚಳುವಳಿ ಅಥವಾ ಅಹಿಂಸಾ ಘರ್ಷಣೆಗಳು ಎಂದು ಕರೆಯಲ್ಪಡುತ್ತದೆ) ಊಹೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ನಡೆದಿವೆ 1900 ರ ಪ್ರಾರಂಭದಿಂದ, ವರುಷಕ್ಕೊಮ್ಮೆ ಸರಾಸರಿ ಒಂದು ಮುಖ್ಯ ನಾಗರೀಕ ಪ್ರತಿಭಟನವು ಅಶಕ್ತ ಪ್ರಭುವಿನ ವಿರುದ್ಧ ನಡೆದಿದೆ.[1] ಚಳುವಳಿಯನ್ನು ನಡೆಸಿದ ಈ ಪ್ರಜೆಗಳು - 1972 ರಿಂದ ಭೂರಾಜಕೀಯ ಪ್ರಮುಖ ಘರ್ಷಣೆಗಳ ಪರಿಣಾಮಗಳನ್ನು ಮತ್ತು ಪ್ರಜಾಪ್ರಭುತ್ವದ ಬದಲಾವಣೆಗಳನ್ನು ಹೆಚ್ಚಾಗಿ ಸ್ಪಷ್ಟಪಡಿಸಿದ್ದಾರೆ.[2] ಆದರೆ ನೀತಿ ರಚನಾಕಾರರು, ಪಂಡಿತರು, ಪತ್ರಿಕೋದ್ಯಮಿಗಳು ಮತ್ತು ಇತರ ಆಸಕ್ತ ವೀಕ್ಷಕರು ಮುಂತಾದವರು ಸಾಮಾನ್ಯ ಪ್ರಜೆಗಳ, ಜುಲುಮೆಯನ್ನು ಕೆಡಿಸುವ ಮತ್ತು ಕ್ರೌರಿಯವಿಲ್ಲದೆ ಹಕ್ಕುಗಳನ್ನು ಪಡೆಯುವ ಶಕ್ತಿಯನ್ನು ನಿರಂತರವಾಗಿ ಅಲ್ಪವಾಗಿ ತಿಳಿಯುತ್ತಾಬಂದಿದ್ದಾರೆ.

### ವಿಶ್ಲೇಷಿಸುವ ಕಪ್ಪುಕಲೆ (ಬ್ಲೈಂಡ್ ಸ್ಪಾಟ್)

ತುನಿಶಿಯಾ, ಮತ್ತು ಇಜಿಪ್ಟ್ ನಲ್ಲಿ 2011 ರಲ್ಲಿ, ಮತ್ತು ಇತ್ತೀಚೆಗೆ 2014 ರಲ್ಲಿ, ಉಕ್ರೈನ್ನಲ್ಲಿ, ನಡೆದ ದಂಗೆಗಳು, ನಾಗರೀಕ ಪ್ರತಿಭಟನೆಗಳಿಂದ ನಾಗರೀಕರ ಶಕ್ತಿ ಮತ್ತು ಬದಲಾಯಿಸುವ ಸಾಮರ್ಥ್ಯಕ್ಕೆ ಎಲ್ಲರೂ ಬೆರಗಾಗುವಂತಹ ಉದಾಹರಣೆಗಳಾಗಿವೆ. ಈ ದಂಗೆಗಳು ಏಳುವಾಗ ಯಾರೂ ನೋಡಿರಲಿಲ್ಲ. ಇದುವೇ ಅದರ ವಿಶೇಷ ಅಂಶವಾಗಿದೆ. ಸೆರ್ಬಿಯ(2000), ಜಿಯೊರ್ಜಿಯ (2003) ಮತ್ತು ಉಕ್ರೈನ್ (2004) ಗಳಲ್ಲಿ ನಡೆದ "ಬಣ್ಣ ಕ್ರಾಂತಿ" ಯನ್ನು ಕೆಲವರು ಮಾತ್ರ ನೋಡಲು ಸಾಧ್ಯವಾಯಿತು. ದಶಕಗಳ ಹಿಂದೆ, ಆಯೋಜಿತ ಅಹಿಂಸಾ ಪ್ರತಿಭಟನೆಯು, ಫ್ಲಿಪಿನೊ ಸರ್ವಾಧಿಕಾರಿಯಾದ ಫೆರ್ಡಿನಂಡ್ ಮಾರ್ಕೊಸ್ (1986), ಚಿಲಿಯನ್ ಸರ್ವಾಧಿಕಾರಿಯಾದ ಅಗಸ್ಟೊ ಪಿನೊಚೆಟ್ (1988), ಪೊಲಂಡಿನ ಸೊವಿಯತ್ ರೆಜಿಮ್(ಆಳ್ವಿಕೆ) (1989) ಅಥವಾ ದಕ್ಷಿಣ ಆಫ್ರಿಕಾದ ವರ್ಣದ್ವೇಶ ಆಳ್ವಿಕೆ ಮುಂತಾದವರ ಬೀಳಿಗೆ ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ.

© 2014 Peter Ackerman and Hardy Merriman

ಅಂತರ್ರಾಷ್ಟ್ರೀಯ ಮತ್ತು ಸ್ಥಳೀಯ ಪ್ರವೀಣರು ಇವುಗಳನ್ನು ಮತ್ತು ಇತರ ಅಹಿಂಸಾ ಘರ್ಷಣೆಗಳನ್ನು ವಿವರಿಸಲು ಅಸಕ್ತರಾಗಿದ್ದಾರೆ. ಯಶಸ್ವಿ ನಾಗರೀಕ ಪ್ರತಿಭಟನೆಗಳನ್ನು, ಅವರು ಒಂದು ದತ್ತ ಸಮಯದಲ್ಲಿ, ದತ್ತ ದೇಶದಲ್ಲಿ, ನಿರ್ಧಿಷ್ಟವಾದ ಪ್ರತ್ಯೇಕ ಗುಂಪಿನ ಆಧಾರದ ಮೇಲೆ ನಡೆದ ಐತಿಹಾಸಿಕ ವ್ಯತಿಕ್ರಮಗಳು ಎಂದು ಮೆಲಿಂದ ಮೇಲೆ ತೀರ್ಮಾನಿಸುತ್ತಾರೆ. ಏಕೆಂದರೆ, ಅವರ ನೈತಿಕ ಶಕ್ತಿಯು ನಿರ್ಧಿಷ್ಟ ವಿಷಯಕ್ಕೆ ಸಂಬಂಧಿತವಾಗಿದ್ದು, ಹಿಂಸಿಸುವ ಜನರ ವಿರುದ್ಧ, ಜನಸಾಮಾನ್ಯರು ಪದವಿ ಪಡೆಯುವ ಒಂದು ಸಾಮಾನ್ಯ ತಂತ್ರಕ್ಕೆ ಉದಾಹರಣೆಯಾಗಿ ಅವುಗಳನ್ನು ಪರಿಗಣಿಸುವುದಿಲ್ಲ. ಹಾಗಾದರೂ, ಜಗತ್ತಿನಾದ್ಯಂತ ನಿರಂಕುಶಪ್ರಭುಗಳು ಈ ಕಪ್ಪು ಕಲೆಯಿಂದ ಕಷ್ಟಪಡುವುದಿಲ್ಲ. ತಮ್ಮ ಆಳ್ವಿಕೆಗೆ ನಾಗರೀಕ ಶಕ್ತಿ ಅಭಿಯಾನಗಳು ಪ್ರಮುಖವಾದ ಬೆದರಿಕೆ ಎಂದು ಕಂಡುಕೊಂಡಿದ್ದಾರೆ.

ಕಳೆದ ದಶಕದಲ್ಲಿ ನಡೆದ ಅಹಿಂಸಾ ಘರ್ಷಣೆಗಳ ಸಂಭವಗಳಿಂದ, ನಾಗರೀಕ ಶಕ್ತಿ ಅಭಿಯಾನಗಳು ಏಕೆ ಯಶಸ್ವಿಯಾಗುತ್ತವೆ ಎಂದು ಪ್ರಜಾಪ್ರಭುತ್ವದ ಬದಲಾವಣೆಗೆ ಬೆಂಬಲ ನೀಡುವ ಜನರು ತಿಳಿದು ಕೊಳ್ಳೂವುದು ಅತಿ ಮುಖ್ಯವಾಗಿದೆ. ಅಹಿಂಸಾ ಘರ್ಷಣೆಯು ವಿವಿಧ ವಿಷಯಗಳಲ್ಲಿ ಕೆಲಸಮಾಡುತ್ತದೆ. ಏಕೆಂದರೆ, ಇದು ಎರಡು ಮೂಲಭೂತ ವಾಸ್ತವತೆಯನ್ನು ಪರಿಗಣಿಸುತ್ತದೆ.: ಅಧಿಕಾರದಲ್ಲಿರುವ ಆಡಳಿತವು ತನ್ನ ಅಧಿಕಾರವನ್ನು ಉಳಿಸಿಕೊಳ್ಳಲು ತಾವು ಹಿಂಸಿಸುವ ಪ್ರಜೆಗಳ ಆಜ್ಞಾಪಾಲನೆಯ ಮೇಲೆ ಅವಲಂಬಿತವಾಗಿರುತ್ತದೆ. ಮತ್ತು ಈ ಆಡಳಿತದಲ್ಲಿರುವ ಎಲ್ಲರೂ ಇಂತಹ ಪ್ರಾಮಾಣಿಕರಾಗಿರುವುದಿಲ್ಲ.

## ನಾಗರೀಕ ಪ್ರತಿಭಟನೆಗಳು ಹೇಗೆ ಕೆಲಸ ಮಾಡುತ್ತವೆ.

ಈ ಎರಡು ಸತ್ಯಸ್ಥಿತಿಗಳ ಆಧಾರದ ಮೇಲೆ, ನಾಗರೀಕ ಘರ್ಷಕರು ಶಿಸ್ತು ಬದ್ಧವಾಗಿ ಪ್ರಜೆಗಳನ್ನು ಆಜ್ಞಾಪಾಲನೆಯಿಂದ ಹಿಂತೆಗೆದುಕೊಳ್ಳಲು ಒಟ್ಟುಗೂಡಿಸುತ್ತಾರೆ. ಮತ್ತು ಅಹಿಂಸಾ ಒತ್ತಡವನ್ನು - ಮುಷ್ಕರಗಳು, ಬಹಿಷ್ಕಾರಗಳು, ಗುಂಪು ಪ್ರದರ್ಶನಗಳು ಮತ್ತು ಇತರ ಕ್ರಿಯೆಗಳು ಮುಂತಾದ ತಂತ್ರಗಳ ಮೂಲಕ ಹಿಂಸಾತ್ಮಕ ಪದ್ಧತಿಯನ್ನು ವಿರೋಧಿಸಲು ಮತ್ತು ಹಕ್ಕು ಗಳು, ಸ್ವಾತಂತ್ರಯ ಮತ್ತು ನ್ಯಾಯವನ್ನು ಸಾಧಿಸುತ್ತಾರೆ. ನಾಗರೀಕ ಘರ್ಷಣೆಯಲ್ಲಿ ಭಾಗವಹಿಸುವಿಕೆಯು ಬೆಳೆಯುತ್ತಾಹೋದಂತೆ, ಘರ್ಷಕರ ವಿರುದ್ಧದ ನಿಗ್ರಹವು ಶಾಂತಿಯನ್ನು ಕಾಪಾಡಲು ಸಾಲದ್ದಾಗುತ್ತದೆ. ಇದರ ಬದಲು ಇನ್ನೂ ಹೆಚ್ಚಾಗಿ ಸಿಡಿಯುತ್ತದೆ.

ಸಿಡಿತವು ಮುಂದುವರೆದಂತೆ, ಸರ್ಕಾರ ಮತ್ತು ಇತರ ರಾಜ್ಯಕ್ಕೆ ಮುಖ್ಯವಾದ ಸಂಸ್ಥೆಗಳಲ್ಲಿ ಬಿರುಕುಗಳು ಪ್ರಾರಂಭವಾಗುತ್ತವೆ. (ಅಂದರೆ ಆರಕ್ಷಕರು, ಸೇನೆ, ಮಾಧ್ಯಮ ಮತ್ತು ರಾಜಕೀಯ, ಅಧಿಕಾರಿ, ಮತ್ತು ಆರ್ಥಿಕ ಅಸ್ಥಿತ್ವಗಳು). ಈ ಬಿರುಕುಗಳು ಕ್ರೂರತೆಗಳಿಗೆ ಎಡೆಮಾಡಿಕೊಡುತ್ತವೆ. ಕೊರತೆಗಳು ಮುಂದುವರೆದಂತೆ, ಅಧಿಕಾರಿಗಳು ಅವಲಂಭಿಸಿರುವ ಆಡಳಿತಕ್ಕೆ ಆಧಾರವಾದ ಶಕ್ತಿಗಳು - ವಸ್ತು ಸಂಪನ್ಮೂಲಗಳ ನಿಯಂತ್ರಣಗಳು, ಮಾನವ ಸಂಪನ್ಮೂಲಗಳು, ಪ್ರಜೆಗಳ ಜಾಣ್ಮೆಗಳು ಮತ್ತು ಜ್ಞಾನ, ಮಾಹಿತಿ ಪರಿಸರ, ಮತ್ತು ಸಮ್ಮತಿ ಕೊಡುವ ಸಾಮರ್ಥ್ಯ- ಮುಂತಾದವು ಹಾಳಾಗುತ್ತವೆ. ಅವರ ಆಜ್ಞೆಗಳನ್ನು ಪಾಲಿಸಲು ಬದುಕಬಲ್ಲ ಅಧಿಕಾರದ ಸರಪಳಿಗಳಾವುದೂ ಇಲ್ಲದೆ, ನಿರಂಕುಶಪ್ರಭುಗಳು ಕೊನೆಯಲ್ಲಿ ಆಯ್ಕೆ ರಹಿತರಾಗುತ್ತಾರೆ ಮತ್ತು ಮುಂದುವರೆದ

© 2014 Peter Ackerman and Hardy Merriman

ಅಹಿಂಸಾ ಒತ್ತಡದಿಂದ ಅವರು ತಮ್ಮ ಪದವಿಗಳನ್ನ ಬಿಡುವ ನಿರ್ಬಂಧಕ್ಕೊಳಗಾಗುತ್ತಾರೆ. ಇದರ ಪರಿಣಾಮವು ರಭಸದ ಬದಲಾವಣೆಯಾಗಿದೆ.

## ಜಾಣ್ಮೆಗೆ ಪ್ರತಿಯಾಗಿ ಸ್ಥಿತಿಗತಿಗಳು.

ಘಟನೆಗಳು ಹೆಚ್ಚಾದಂತೆ ಮತ್ತು ನಾಗರೀಕ ಘರ್ಷಣೆಯ ಪರಿಣಾಮವಾಗಿ, ಇದರ ಫಲಿತಾಂಶವನ್ನು ಯಾವ ಅಂಶಗಳು ನಿರ್ಣಯಿಸುತ್ತವೆ ಎಂದು ತಿಳಿಯುವುದು ಮುಖ್ಯವಾಗಿದೆ. ಬಡಿದಾಟದ ಹಿಂದಿನ ಪರಿಸ್ಥಿತಿಗಳು ಒಂದು ಚಳುವಳಿಯು ಯಶಸ್ವಿಯಾಗುತ್ತದೆಯೆ ಎಂದು ತೀರ್ಮನಿಸುತ್ತದೆಯೆ? ಅಥವಾ ಎಂತಹ ತಂತ್ರ ಆಯ್ಕೆ ಮತ್ತು ಜಾಣ್ಮೆಯಿಂದ ಹೋರಾಡುತ್ತಾರೆ ಎಂಬುದರ ಆಧಾರದ ಮೆಲೆಯೇ ಅವರ ಜಯವು ನಿರ್ಣಯವಾಗಿದೆಯೆ?

ಅಹಿಂಸಾ ಪ್ರತಿಭಟನದ ಮೇಲೆ ಅಂತರ್ರಾಷ್ಟ್ರೀಯ ಕೇಂದ್ರದ ಮಂಡಲಿಯ ವಿಮರ್ಶಾತ್ಮಕ ಘಟ್ಟವು(ನಾವು ಇದರ ಭಾಗವಾಗಿದ್ದೇವೆ) ಒಂದು ಅಭಿಯಾನದ ಫಲಿತಾಂಶವನ್ನು ನಿರ್ಣಯಿಸಲು ಪರಿಸ್ಥಿತಿಗಿಂತ ಜಾಣ್ಮೆಯೆ ಮುಖ್ಯವೆಂದು ವಾದಿಸುತ್ತದೆ. ಈ ವಾದವು ಸಾಮಾನ್ಯವಾಗಿ ಪ್ರಮುಖ ಬೆಂಬಲವನ್ನು ಸ್ವಾಗತಿಸುತ್ತದೆ. ವಿಶೇಷವಾಗಿ ಪ್ರತಿವಾದಿಗಿರುವ ಹಿಂಸೆಯನ್ನು ಉಪಯೋಗಿಸುವ ಸಮ್ಮತಿಯ ಮೇಲೆ ಹೆಚ್ಚು ಕೇಂದ್ರಿತವಾಗಿದೆ. " ಅಹಿಂಸಾ ಮಾರ್ಗವು ಮೃದು ಮತ್ತು ದಯಾಳು ಸ್ವಭಾವವುಳ್ಳ ಎದುರಾಳಿಯ ಮೇಲೆ ಮಾತ್ರ ಪ್ರಯೋಗಿಸಲು ಯೋಗ್ಯವಾಗಿದೆ" ಎಂಬುದು ಒಂದು ಆಗಾಗ ಮಾಡುವ ವಾದ. ಆದರೆ ದಕ್ಷಿಣ ಆಫ್ರಿಕಾದ ವರ್ಣದ್ವೇಶ ಆಡಳಿತ, ಚಿಲಿಯಲ್ಲಿನ ಪಿನೊಚಟ್, ಫಿಲಿಪ್ಪೈನ್ಗಳಲ್ಲಿನ ಮಾರ್ಕೊಸ್, ಅಥವಾ ಪೋಲ್ಂಡಿನಲ್ಲಿನ ಸಮತಾವಾದಿ ಆಡಳಿತ ಮುಂತಾದವನ್ನು ಸೌಕರ್ಯವಾಗಿ ಮರೆಯಲಾಗಿದೆ. ಇತ್ತೀಚಿನ ಉದಾಹರಣೆಗಳು ಇಜಿಪ್ಟ್ನ ಹೊನ್ಸಿ ಮುಬಾರಕ್ ಮತ್ತು ತುನಿಶಿಯನ ಬೆನ್ ಅಲಿ. ಈ ಆಡಳಿತಗಳಲ್ಲಿ ಯಾವುದೂ ಮೃದು, ದಯಾಳು ಅಥವಾ ತೀವ್ರ ಹಿಂಸೆ ಮಾಡಲು ಹಿಂಜರಿಯುವಂತಹದಾಗಿಲ್ಲ.

ಇಂತಹ ಗುಣಾತ್ಮಕ ಉದಾಹರಣೆಗಳು ಪರಿಮಾಣ ಸಂಬಂಧಿತ ವಿಭಜನೆಯಿಂದ ಬೆಂಬಲಿತವಾಗಿದೆ. 2008 ರಲ್ಲಿ, ಆರ್ಗನೈಸೇಶನ್ ಫ್ರೀಡಮ್ ಹೌಸ್ ಒಂದು ಸಂಶೋಧನಾಧ್ಯಯನವನ್ನು ಹೊರತಂದಿತು. ಇದು ವಿವಿಧ ಆಕಾರ ಅಂಶಗಳು ಮತ್ತು ನಾಗರೀಕ ಪ್ರತಿಭಟನೆಯ ಮೇಲೆ ಅವುಗಳ ಪರಿಣಾಮವನ್ನು 64 ಬದಲಾವಣೆಗಳಲ್ಲಿ ಅಧಿಕಾರದಲ್ಲಿರುವ ಸರಕಾರಗಳಿಂದ 1975 ರಿಂದ 2006 ರವರೆಗಿನ ಅವಧಿಯಲ್ಲಿ ಹೊರತಂದಿತು. ಇಲ್ಲಿದೆ ಅದರ ಒಂದು ಆಯ್ದ ಭಾಗ:

> ನಾಗರೀಕ ಪ್ರತಿಭಟನೆಗಳ ಸೋಲು ಅಥವಾ ಗೆಲುವಿನ ಮೇಲೆ ಈ ಅಧ್ಯಯನದಲ್ಲಿನ ರಾಜಕೀಯ ಅಥವಾ ಪರಿಸರ ಅಂಶಗಳು ಅಂಕಿ ಸಂಖ್ಯಾಶಾಸ್ತ್ರದ ಪ್ರಕಾರ ಮುಖ್ಯವಾಗಿ ಪರಿಣಾಮಬೀರುವುದಿಲ್ಲ. (ನಾಗರೀP ಅಭಿಯಾನಗಳು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ, ಆರ್ಥಿಕವಾಗಿ ದುರ್ಬಲ ದೇಶಗಳಲ್ಲಿಯೂ ಸಬಲ

© 2014 Peter Ackerman and Hardy Merriman

> ದೇಶಗಳಂತೆಯೆ ಪರಿಣಾಮಕಾರಿಯಾಗಿದೆ. ಈ ಅಧ್ಯಯನವು ಒಂದು ಅಂಟುಸ್ವಭಾವದ ನಾಗರೀಕ ವಿರೋಧಕ್ಕೆ ಜಾತಿಯ ವಿರುದ್ಧ ಗುಣಧರ್ಮಗಳು ಕಾರಣ ಎಂದು ಯಾವುದೇ ಪ್ರಮುಖ ಪುರಾವೆಗಳನ್ನು ಕಂಡಿರುವುದಿಲ್ಲ. ಆಡಳಿತದ ಬಗೆಯು ನಾಗರೀಕ ಅಭಿಯಾನಕ್ಕೆ ಮುಖ್ಯ ಕಾರಣವಲ್ಲ.[3]

ಈ ಅಧ್ಯಯನದಲ್ಲಿ, ನಾಗರೀಕ ಪ್ರತಿಭಟನಾ ಅಭಿಯಾನದ ಪರಿಣಾಮಗಳಿಗೆ ಸಂಖ್ಯಾಶಾಸ್ತ್ರದಲ್ಲಿ ಪ್ರಾಮುಖ್ಯತೆಯಿರುವ ಒಂದೇ ಅಂಶವು ಸರ್ಕಾರದ ಕೇಂದ್ರೀಕರಣವಾಗಿದೆ. ಲೇಖಕರು ಬರೆದಿರುವುದುದೇನೆಂದರೆ:

> ಅಧ್ಯಯನವು ದೊಡ್ಡ ಮಟ್ಟದ ಕೇಂದ್ರೀಕರಣವನ್ನು ಸೂಚಿಸುತ್ತದೆ. ಆಡಳಿತ ಅಧಿಕಾರಕ್ಕೆ ಸವಾಲು ಒಡ್ಡುವ ಶಕ್ತಿಯಿರುವದರೊಂದಿಗೆ ಸದೃಡ ನಾಗರೀಕ ಅಭಿಯಾನದ ಹುಟ್ಟಿನೊಂದಿಗೆ ಸಕಾರಾತ್ಮಕವಾಗಿ ಸಂಬಂಧಪಟ್ಟಿದೆ. ಇದರ ಅದಲುಬದಲೂ ಸಹ ನಿಜವೆಂದು ತೋರುತ್ತದೆ: ಸರ್ಕಾರದ ಕೇಂದ್ರೀಕರಣವು ಎಷ್ಟರ ಮಟ್ಟಿಗಿದೆಯೊ, ಅಷ್ಟು ಕಡಿಮೆಯಾದ ಯಶಸ್ವೀ ನಾಗರೀಕ ಅಭಿಯಾನದ ಸಜ್ಜುಗೊಳಿಸುವಿಕೆಯು ಇರುತ್ತದೆ.[4]

ಈ ರೀತಿಯಾಗಿ, ಈ ಅಧ್ಯಯನವು ನಾಗರೀಕ ಪ್ರತಿಭಟನಾ ಅಭಿಯಾನಕ್ಕೆ ಕಾರಣವಾದ ಒಂದು ಪರಿಸರ ಅಂಶವನ್ನು ಕಂಡುಹಿಡಿದಿದೆ. ಇಂತಹ ಬಡಿದಾಟಗಳಿಗೆ ಸ್ಥಿತಿಗತಿಗಳು ಕಾರಣವಲ್ಲ ಎಂಬುದು ತಿಳಿಯುತ್ತದೆ.

ಮೂರು ವರುಷಗಳ ನಂತರ, ಅವರ ಪುರಸ್ಕಾರ ಪಡೆದ 2011 ರ ಪುಸ್ತಕವಾದ, ವೈ ಸಿವಿಲ್ ರೆಸಿಸ್ಟನ್ಸ್ ವರ್ಕ್ಸ್: ದಿ ಸ್ಟ್ರಾತೆಜಿಕ್ ಲಾಜಿಕ್ ಆಫ್ ನಾನ್ವಯಲಂಟ್ ಕಾನ್ಫ್ಲಿಕ್ಟ್, ವಿದ್ವಾಂಸರು ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟಿಫನ್ ಅವರು, 1900 ಮತ್ತು 2006ರ ಮಧ್ಯೆ ನಡೆದ ಸರ್ಕಾರಗಳಿಗೆ ಸವಾಲು ಒಡ್ಡಿದ 323 ಅಹಿಂಸ ಮತ್ತು ಹಿಂಸಾ ಅಭಿಯಾನಗಳನ್ನು ತೀವ್ರವಾಗಿ ಪರಿಶೋಧಿಸಿದರು.[5] ಅವರ ಕಂಡುಹಿಡಿಯುವಿಕೆಯ ಪ್ರಕಾರ ಅಹಿಂಸಾ ಅಭಿಯಾನಗಳು ಶೇಕಡಾ 53% ಯಶಸ್ವಿಯನ್ನೂ ಹಿಂಸಾ ಅಭಿಯಾನಗಳು ಶೇಕಡಾ 26% ಯಶಸ್ವಿಯನ್ನು ಪಡೆದಿದೆ.[6] ನಾಗರೀಕ ಪ್ರತಿಭಟನಾ ಅಭಿಯಾನಗಳ ಯಶಸ್ಸಿನ ಮೇಲೆ ರಾಜ್ಯ ನಿಗ್ರಹ ಮತ್ತು ಇತರ ಆಕಾರ ಅಂಶಗಳು ಪರಿಣಾಮ ಬೀರುತ್ತದೆಂದು ಅವರು ಕಂಡುಕೊಂಡರು. (ಸಾಮಾನ್ಯವಾಗಿ ಇದಕ್ಕೆ ಕಡಿಮೆಯಿರುವುದನ್ನು ಊಹಿಸಿದರೂ ಕೂಡ - ಕ್ರೂರ ರಾಜ್ಯ ನಿಗ್ರಹದ ವಿಷಯದಲ್ಲಿ, ಇದರ ಯಶಸ್ವಿ ದರವು ಸುಮಾರು 35% ಇರುತ್ತದೆ) ಅವರು ಅಭಿಯಾನದ ಪರಿಣಾಮಗಳನ್ನು ನಿರ್ಣಯಿಸುವ ಆಕಾರ ಸ್ಥಿತಿಗತಿಗಳು ನೋಡಿಲ್ಲ.[7] ಮಾಹಿತಿಗಳನ್ನು ಸಂಪೂರ್ಣವಾಗಿ ಪರಿಶೀಲಿಸಿದನಂತರ, ಅವರು "ಈ ಪುರಾವೆಯು ನಾಗರೀಕ ಪ್ರತಿಭಟನೆಯ ಯಸಸ್ಸಿಗೆ ಪರಿಸರದ ಸ್ಥಿತಿಗತಿಗಳು ಕಾರಣವಲ್ಲ ಎಂದು ಕಂದುಕೊಂಡರು. ಅನೇಕರು ಈ ಕಾರಣವನ್ನು ಅಹಿಂಸಾ ಅಭಿಯಾನಗಳ ಪರಾಜಯಕ್ಕೆ ನೀಡುವರು.[8]

ಈ ಫಲಿತಾಂಶಗಳು ಸರಿಯಲ್ಲದ ಪಕ್ಷಪ್ರತಿಜ್ಞೆಯನ್ನು, ನಾಗರೀಕ ಪ್ರತಿಭಟನೆಗೆ ಪೌರಾಣಿಕ ಅರಿವನ್ನು ಆಧಾರವಾಗಿಟ್ಟುಕೊಂಡು ಪ್ರಕಟಿಸುತ್ತದೆ. ಈ ಬಡಿದಾಟಗಳ ಪರಿಣಾಮಕ್ಕೆ, ಸ್ಥಿತಿಗತಿಗಳಿಗಿಂತ ಜಾಣ್ಮೆ ಮತ್ತು ತಂತ್ರ

ಆಯ್ಕೆಗಳೆ ಕಾರಣ. ಜುಲುಮೆಯ ಎದುರಾಳಿಗಳಿಂದ ಮೊದಲನೆಯ ತಂತ್ರಾಧಾರಿತ ನಿರ್ಧಾರವಾದ ಜಗಳವಾಡುವುದು ಹೇಗೆ ಎಂಬುದನ್ನು ಪರಿಗಣಿಸಿದರೆ ಆಶ್ಚರ್ಯಕರವಾಗಿಲ್ಲ. ಹೊರ ಪರಿಸ್ಥಿತಿಯು ಫಲಿತಾಂಶವನ್ನು ನಿರ್ಣಯಿಸಲು ಮುಖ್ಯವೆಂದಾದರೆ, ಹೇಗೆ ಜಗಳಮಾಡುವುದೆಂಬ ತಂತ್ರ ಆಯ್ಕೆ, ಜುಲುಮೆಯ ವಿರುದ್ಧ ಹೋರಾಡುವ ಜನರಿಗೆ ದೊಡ್ಡ ವಿಚಾರವಾಗುವಿದಿಲ್ಲ. ಕಾಲಕ್ರಮದಲ್ಲಿ, ಹಿಂಸಾ ಮತ್ತು ಅಹಿಂಸಾ ಅಭಿಯಾನಗಳ ನಡಿವಿನ ಯಶಸ್ಸಿನ ಪರಿಮಾಣವು ಅನೇಕ ವಿಷಯಗಳಲ್ಲಿ ಸಮನಾಗಿರುತ್ತದೆ.

ಆದರೆ ಅದನ್ನು ಈ ಮಾಹಿತಿಯು ಸುಚಿಸುವುದಿಲ್ಲ. 1900 ಮತ್ತು 2006 ಗಳ ನಡಿವೆ ಪ್ರಜಾಶಕ್ತಿ ಅಭಿಯಾನಗಳು ಎರಡು ಪಟ್ಟು ಯಶಸ್ವಿಯಾಗಿವೆ. ಇತ್ತೀಚಿನ ಅಧ್ಯಯನವು ಇದರಲ್ಲಿ ಯಾವುದೇ ಬದಲಾವಣೆಯೂ ಇಲ್ಲ ಎಂದು ಸೂಚಿಸುತ್ತದೆ.[9] ಕೆಲವರು, ನಾಗರೀಕ ಪ್ರತಿಭಟನಾಕಾರರು ಸುಲಭವಾಗಿ ಜಯಗಳಿಸುವ ಅಭಿಯಾನಗಳನ್ನೇ ಆರಿಸುತ್ತಾರೆಂದು ಹೇಳುತ್ತಾರೆ. ಆದರೆ ಚೆನೊವೆತ್ ಮತ್ತು ಸ್ಟೀಫನ್ರವರು ಈ ವಾದವನ್ನು ಎದುರುನೋಡುತ್ತಿದ್ದರು. ಮತ್ತು ಅವರು "ಅಹಿಂಸಾ ಅಭಿಯಾನಗಳ ಹೆಚ್ಚಿನ ಸಂಖ್ಯೆಯು ಅಧಿಕಾರದ ಆಡಳಿತದಲ್ಲಿಯೆ ಉಂಟಾಗಿದೆ… ಇಲ್ಲಿ ಸರ್ಕಾರದ ವಿರುದ್ಧ ಶಾಂತಿ ಪೂರ್ವಕವಾದ ವಿರೋಧವೆ ಅತ್ಯಂತ ದುಶ್ಪರಿಣಾಮಕಾರಿಯಾಗಿರುತ್ತದೆ."[10]

ನೊಬಲ್ ಪ್ರಶಸ್ತಿ ವಿಜೇತರಾದ ಅರ್ಥಶಾಸ್ತ್ರಜ್ಞರಾದ ಥಾಮಸ್ ಶೆಲ್ಲಿಗ್ ನವರು ತಮ್ಮ 50 ವರುಷದ ಹಿಂದಿನ ಪುಸ್ತಕವಾದ ಸಿವಿಲಿಯನ್ ರಸಿಸ್ಟನ್ಸ್ ಅಸ್ ಅ ನ್ಯಾಷನಲ್ ಡಿಫೆನ್ಸ್: ನಾನ್ ವಯಲಂಟ್ ಆಕ್ಷನ್ ಅಗೆನ್ಸ್ಟ್ ಅಗ್ರೆಸ್ಸನ್ ನ ಪ್ರಬಂದವೊಂದರಲ್ಲಿ ಈ ರೀತಿ ತೀರ್ಮನಕ್ಕೆ ಬಂದಿದ್ದಾರೆ:

> ನಿರಂಕುಶಪ್ರಭುಗಳು ಮತ್ತು ಅವರ ಪ್ರಜೆಗಳು ಸಾಮಂಜಸ್ಯವಾಗಿದ್ದಾರೆ. ಅವನಿಗೆ ಬೇಕಾದುದನ್ನು ಅವರು ನಿರಾಕರಿಸಬಹುದು- ಅವರಿಗೆ ಸಾಧ್ಯ ಎಂದರೆ, ಅವರಿಗೆ ಶಿಸ್ತು ಬದ್ಧ ಸಂಸ್ಥೆಯಿದ್ದರೆ ಸಹಯೋಗವನ್ನು ನಿರಾಕರಿಸಬಹುದು. ಮತ್ತು ಇವನು ಅವರಿಗೆ ಬೇಕಾದುದೆಲ್ಲವನ್ನೂ ನಿರಾಕರಿಸಬಹುದು. - ಅವನು ಇದನ್ನು ತನ್ನಲ್ಲಿರುವ ಸೇನಾ ಬಲವನ್ನು ಪ್ರಯೋಗಿಸಿ ನಿರಾಕರಿಸಬಹುದು…. ಇದು ಒಂದು ಚೌಕಾಶಿ ಮಾಡುವ ಪರಿಸ್ಥಿತಿಯಾಗಿದೆ. ಇಲ್ಲಿ ಎರಡೂ ಕಡೆಯವರೂ ಸಾಕಷ್ಟು ಶಿಸ್ತು ಬದ್ಧವಾಗಿದ್ದಲ್ಲಿ, ಇನ್ನೊಬ್ಬರಿಗೆ ಬೇಕಾದುದೆಲ್ಲವನ್ನೂ ನಿರಾಕರಿಸಬಹುದು; ಮತ್ತು ಯಾರು ಗೆಲ್ಲುತ್ತರೆಂಬುದನ್ನು ನೋಡಬಹುದು.[11]

ಶೆಲ್ಲಿಂಗ್ನ ಪ್ರಕಾರ ನಾಗರೀಕ ಪ್ರತಿಭಟನಾಕಾರರು ಆರಿಸಿದ ತಂತ್ರದಗಳಲ್ಲಿ ಖರ್ಚು ಮತ್ತು ಲಾಭ ಎರಡೂ ಇವೆ. ಹಾಗೆಯೆ ಅಧಿಕಾರ ವರ್ಗಗಳು ಬಳಸುವ ತಂತ್ರದಲ್ಲೂ ಇವೆ. ಮುಂದಾಳುವೆ ಜಯಶಾಲಿ. ಇವನು ಖರ್ಚು ಮತ್ತು ಲಾಭವನ್ನು ಅವನ ಕಡೆಯವರಿಗೆ ಸಮವಾಗಿ ಹಂಚುತ್ತಾನೆ. ಚತುರ ನಾಗರೀಕ ಪ್ರತಿಭಟನಾಕಾರರ ನಾಯಕನು ಸಾಧ್ಯವಾದಷ್ಟು ತೊಂದರೆಗಳನ್ನುಂಟುಮಾಡಿ ಕೊರತೆಗಳನ್ನು ಹೆಚ್ಚಿಸುತ್ತಾನೆ. ಸಣ್ಣ ಪ್ರತಿಭಟನೆಯಿಂದ ದೊಡ್ಡ ಕೊರತೆಯುಂಟಾಗುವಂತಹ ತಂತ್ರಗಳನ್ನು ಕೈಗೊಳ್ಳುತ್ತಾನೆ. ಚತುರ ಅಧಿಕಾರಿಯು ಆಜ್ಞಾಪಾಲನೆಯನ್ನು, ಹೆಚ್ಚಾಗಿ ಹಿಂಸಾ ಮಾರ್ಗದಿಂದ, ಜಾರಿಗೆ ತರಬೇಕು. ಮತ್ತು ಕಡಿಮೆ ಅಹಿಂಸೆಯನ್ನು ಬಳಸಿ ಅಧಿಕ ಆಜ್ಞಾಪಾಲನೆಯನ್ನು

© 2014 Peter Ackerman and Hardy Merriman

ಸಾಧಿಸಬೇಕು. ಕೊರತೆಯ ಒಟ್ಟು ರಾಶಿ ಮತ್ತು ಆಜ್ಞಾಪಾಲನೆಗಳಲ್ಲಿ ಯಾವುದು ಅಧಿಕವಾಗಿದೆ ಎಂಬುದರ ಮೇಲ ಜಯಶಾಲಿ ಯಾರೆಂದು ತೀರ್ಮಾನಿಸಬೇಕು.

## ತಪಶೀಲಪಟ್ಟಿ

ನಾಗರೀಕ ಪ್ರತಿಭಟನಾ ಅಭಿಯಾನಗಳ ಯಶಸ್ಸಿಗೆ ಜಾಣ್ಮೆ ಮತ್ತು ತಂತ್ರ ಆಯ್ಕೆಗಳು ಹೆಚ್ಚು ಪರಿಣಾಮಕಾರಿಯಾಗಿದ್ದಲ್ಲಿ, ನಾವು ಹಂಚಿಕೊಂಡ ಸಾಮಾರ್ಥ್ಯಗಳು, ಜಾಣ್ಮೆಗಳು ಮತ್ತು ಅಧಿಕ ಚಳುವಳಿಕೆಗಳಲ್ಲಿ ಉತ್ತಮವಾದುದನ್ನು, ಯಶಸ್ಸಿಗೆ ಬೇಕಾದ ಸಾಮಾನ್ಯ ಅಂಶಗಳಿಂದ ಕಂಡುಹಿಡಿಯಲು ಶಕ್ತರಾಗಿರಬೇಕು. ಒಂದು ಚಳುವಳಿಯ ಅನೇಕ ಅಂಶಗಳನ್ನು ಪರಿಶೀಲಿಸಬಹುದು. ಅವುಗಳಲ್ಲಿ ನಾಗರೀಕ ಪ್ರತಿಭಟನಾ ಯಶಸ್ಸಿಗೆ ಕಾರಣವಾಗುವ ಮೂರು ಮುಖ್ಯ ಸಾಮರ್ಥ್ಯಗಳು ಇಲ್ಲಿವೆ:

1. ಜನರನ್ನು ಒಟ್ಟು ಗೂಡಿಸುವ ಸಾಮರ್ಥ್ಯ
2. ಕ್ರಿಯಯನ್ನು ನಡೆಸುವ ಯೋಜನೆ.
3. ಅಹಿಂಸಾ ಶಿಸ್ತು

ನಾಗರೀಕ ಪ್ರತಿಭಟನಾ ಅಭಿಯಾನದಲ್ಲಿ ಈ ಸಾಮರ್ಥ್ಯಗಳಿದ್ದಲ್ಲಿ, ಅದು ಮೂರು ಶಕ್ತಿಶಾಲಿ ಪ್ರವೃತ್ತಿಗಳಿಗೆ ವೇದಿಕೆಯಾಗುತ್ತದೆ. ಇವುಗಳು ಆ ಚಳುವಳಿಯ ಯಶಸ್ಸಿಗೆ ಬಹುಮುಖ್ಯ ಕಾರಣಗಳಾಗುತ್ತವೆ. ಅವು:

1. ನಾಗರೀಕ ಪ್ರತಿಭಟನೆಯಲ್ಲಿ ಪ್ರಜೆಗಳ ಭಾಗವಹಿಸುವಿಕೆ.
2. ನಿಗ್ರಹ ಕಡಿಮೆಯಾಗುವ ಪರಿಣಾಮ, ಮತ್ತು ವಿರೋಧದ ಹೆಚ್ಚಳ
3. ಚಳುವಳಿಯ ಎದುರಾಳಿಯಿಂದ ಕೊರತೆಯ ಹೆಚ್ಚಳ.

ಒಟ್ಟಾರೆ, ಈ ಮೂರು ಗುಣಗಳು ಮತ್ತು ಪ್ರವೃತ್ತಿಗಳನ್ನು ನಾವು "ತಪಶೀಲಪಟ್ಟಿ" ಎಂದು ಕರೆಯುತ್ತೇವೆ. ಈ ಮೂರು ಗುಣಗಳು ಮತ್ತು ಪ್ರವೃತ್ತಿಗಳ ಹೆಚ್ಚಳದಿಂದ ಒಂದು ಜಳುವಳಿಯು ಯಶಸ್ವಿಯಾಗುವ ಸಾಧ್ಯತೆ ಹೆಚ್ಚೆಂದು ನಂಬುತ್ತೇವೆ. ಈ ನಿಟ್ಟಿನಲ್ಲಿ, ತಪಶೀಲಪಟ್ಟಿಯು ಯಶಸ್ಸನ್ನು ಖಾತ್ರಿಗೊಳಿಸುವ ಒಂದು ಸೂತ್ರವಲ್ಲ. ಆದರೆ ಜನರ ಆಲೋಚನೆ ಮತ್ತು ಪರಿಣಾಮಕಾರಿ ಸುಧಾರಣೆಗೆ ಸಹಾಯಮಾಡುವ ಒಂದು ಚೌಕಟ್ಟು.

ಇದರ ಕೊನೆಯಲ್ಲಿ, ತಪಶೀಲಪಟ್ಟಿಯ ಒಂದು ಕಾರ್ಯವೆನೆಂದರೆ, ಒಂದು ಬಡಿದಾಟದ ಸಮಯದಲ್ಲಿ ಉಂಟಾಗುವ ಅಶಿಸ್ತನ್ನು ಹೋಗಲಾಡಿಸುವುದು. ನಾಗರೀಕ ಪ್ರತಿಭಟನಾ ಅಭಿಯಾನವು ಎದುರುಗೊಳ್ಳುವ ಅತಿಮುಖ್ಯ ಸವಾಲುಗಳಲ್ಲೊಂದು ಜಟಿಲತೆಯಾಗಿದೆ. ಬಡಿದಾಟದ ಹೊಗೆಯ ಮಧ್ಯೆ ನಿರ್ಧಾರತೆಗೆದುಕೊಳ್ಳಲು ಯಾವ ಅಂಶ

ಮುಖ್ಯ ಎಂದು ತೀರ್ಮಾನಿಸುವುದು ಕಷ್ಟಕರವಾಗುತ್ತದೆ. ಒಂದು ಕ್ರಾಂತಿಕಾರಿ ಅಥವಾ ಹೊರಗಿನ ವೀಕ್ಷಕ ಈ ಚಳುವಳಿಯ ಫಲಿತಾಂಶವನ್ನು ನಿರ್ಣಯಿಸಲು, ತಪಶೀಲಪಟ್ಟಿಯಲ್ಲಿರುವ ಮೂರು ಪ್ರವೃತ್ತಿಗಳೂ ಇವೆಯೆ ಎಂದು ತಿಳಿದುಕೊಳ್ಳುವುದು ಆ ಚಳುವಳಿಯ ಪ್ರಸ್ತುತ ಪರಿಸ್ಥಿತಿ, ಬಲ, ಬಲಹೀನತೆ ಮತ್ತು ಯಶಸ್ಸು ಪಡೆಯುವ ನಿರೀಕ್ಷಣೆಯನ್ನು ತೀರ್ಮಾನಿಸಲು ಸಹಾಯಮಾಡುತ್ತದೆ.

ತಪಶೀಲಪಟ್ಟಿಯ ವಿವರಣೆಯು ಕೆಳಗೆ ನೀಡಲಾಗಿದೆ:

**1. ಜನರನ್ನು ಒಟ್ಟು ಗೂಡಿಸುವ ಸಾಮರ್ಥ್ಯ**

ನಿರಂಕುಶಪ್ರಭುಗಳು ಒಡೆದು ಆಳ್ವಿದರಲ್ಲಿ ಪರಿಣಿತರು. ಅವರ ಎದುರಾಳಿಯಾಗಿರುವವರು ಒಟ್ಟು ಗೂಡಿಸುವುದರಲ್ಲಿ ಪರಿಣಿತರಾಗಿರಬೇಕು. ಒಗ್ಗಟ್ಟನ್ನು ಕಟ್ಟುವುದು ಮತ್ತು ಅದನ್ನು ನಿರ್ವಹಿಸುವುದು ಭಹುಮುಖವಾದದ್ದು. ಆದರೆ ಅದರಲ್ಲಿನ ಮುಖ್ಯ ಅಂಶವು ಒಂದು ನಾಗರೀಕ ಪ್ರತಿಭಟನಾ ಅಭಿಯಾನಕ್ಕೆ ಹಂಚಿದ ಹಾಗೂ ಎಲ್ಲರನ್ನೂ ಒಳಗೊಂಡಂತಹ ಗುರಿಯಾಗಿದೆ. ಇದನ್ನು ಸಾಧಿಸಲು ಕ್ರಾಂತಿಕಾರಿ ನಾಯಕನಿಗೆ ಅವರು ಒಟ್ಟು ಗೂಡಿಸಲು ಬಯಸುವ ಜನರ ಕಷ್ಟಗಳು, ಅಪೇಕ್ಷೆಗಳು, ಸಂಸ್ಕೃತಿ ಮತ್ತು ಮೌಲ್ಯಗಳ ಬಗ್ಗೆ ಆಳವಾದ ತಿಳಿವಳಿಕೆಯಿರಬೇಕು. ಎಲ್ಲರಿಂದಲೂ ಬೆಂಬಲ ಹಾಗೂ ಒಗ್ಗಟ್ಟನ್ನು ಪಡೆಯಲು ಇರುವ ಗುರಿಯನ್ನು ಬೆಳೆಸಿ ಪ್ರಚಾರಪಡಿಸಲು ಈ ಜ್ಞಾನವೆ ಆಧಾರವಾಗಿದೆ. ಪರಿಣಾಮಕಾರಿಯಾದ ಗುರಿಯು ಸಾಮಾನ್ಯ ಜನರ ಸ್ವಾನುಭವ ಹಾಗೂ ಭಾವನೆಗಳೊಂದಿಗೆ ಒಂದುಗೂಡುತ್ತದೆ. ಹೀಗೆ ಅವರ ನಾಗರೀಕ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುವಿಕೆಯನ್ನು ಪ್ರೋತ್ಸಾಹಿಸುತ್ತದೆ.

ಒಗ್ಗಟ್ಟನ್ನು ಬೆಳಸಲು ಮತ್ತೊಂದು ಮುಖ್ಯ ಅಂಶವೇನೆಂದರೆ, ನ್ಯಾಯಯುತವಾದ ನಾಯಕತ್ವ ಮತ್ತು ಸಂಸ್ಥೆಯ ಆಕರ. ಚಳುವಳಿಗಳಲ್ಲಿ ಪಾಲ್ಗೊಳ್ಳುವುದು ಕಡ್ಡಾಯವಲ್ಲ. ನಾಯಕರಿಗೆ ಒಗ್ಗೂಡಿಸಿದ ಪ್ರಜೆಗಳ ಮೇಲೆ ಯಾವುದೇ ಹಿಡಿತ ಅಥವಾ ಅಧಿಕಾರವಿರುವುದಿಲ್ಲ. ಎಂದರೆ, ಚಳುವಳಿಯಲ್ಲಿ ನಿರ್ಧಾರಗಳು,ಒಗ್ಗೂಡಿಸುವ ಪ್ರಜೆಗಳಿಗೆ ನ್ಯಾಯವೆನಿಸುವ ರೀತಿಯಲ್ಲಿ ತೆಗೆದುಕೊಳ್ಳಬೇಕು. ಪ್ರತಿ ಅಭಿಯಾನವು ತನ್ನದೇ ಆದ ರೀತಿಯಲ್ಲಿ ಇದನ್ನು ಮಾಡುತ್ತದೆ- ಕೆಲವು ಉನ್ನತ ಮಟ್ಟದಲ್ಲಿಯೂ, ಕೆಲವು ಕೇಂದ್ರೀಕೃತವಲ್ಲದ ರೀತಿಯಲ್ಲಿಯೂ, ಇನ್ನೂ ಕೆಲವು ಎರಡೂ ಸೇರಿದ ರೀತಿಯಲ್ಲಿಯೋ ಮಾಡುತ್ತವೆ. ಅಭಿಯಾನಗಳಲ್ಲಿ ನಾಯಕತ್ವವು ವಿವಿಧ ಬಗೆಯಾಗಿರುತ್ತವೆ. ಒಗ್ಗಟ್ಟೆಂಬುದು ಎಲ್ಲಾಬಗೆಯ ನಾಯಕತ್ವ ಮತ್ತು ಪ್ರಜೆಗಳ ಒಟ್ಟುಗೂಡಿಸುವಿಕೆಯಾಗುತ್ತದೆ. ಹೆಸರಿಗೆ ಮಾತ್ರ ಅಥವಾ ದೈವೀ ವರ್ಚಸ್ಸಿನ ಪ್ರತಿಯೊಬ್ಬ ನಾಯಕರಿಗೂ ಸ್ಥಳೀಯ ನಾಯಕರಿದ್ದು ಅವರು ಸಂಯೋಜನೆ, ಸಂವಾದ, ವಿವಿಧ ಗುಂಪುಗಳ ಮಧ್ಯೆ ಆಸಕ್ತಿ ಹುಟ್ಟಿಸುವುದು ಮುಂತಾದವುಗಳಲ್ಲಿ ಅತ್ಯಂತ ಚಾತುರ್ಯದಿಂದ ವರ್ತಿಸುವವರಾಗಿರಬೇಕು. ಹೆಚ್ಚುಕಾಲ ಒಗ್ಗಟ್ಟನ್ನು ಕಾಪಾಡಲು, ವಿವಿಧ ನಾಯಕರು (ಸ್ಥಳೀಯ ಮತ್ತು ರಾಷ್ಟ್ರಮಟ್ಟ) ವಿವಿಧ ಹಂತದಲ್ಲಿ,ದೇಶದ ಬೇರೆ ಬೇರೆ ಭಾಗಗಳಿಂದ, ವಿವಿಧ ಗುಂಪುಗಳನ್ನು ಪ್ರತಿನಿದಿಸಿ ಕೆಲಸಮಾಡಬೇಕು.

1980ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಶ ವಿರೋಧ ಚಳುವಳಿಯಲ್ಲಿ ಒಗ್ಗಟ್ಟಿನ ಈ ಎರಡು ಅಂಶಗಳು ಕಾಣಸಿಗುತ್ತವೆ. ನೂರಾರು ಸ್ಥಳೀಯ ನಾಗರೀಕರ ಗುಂಪು ಆ ದಶಕದಲ್ಲಿ ಬೆಳೆದು ಬಂದು ಸ್ಥಳೀಯ ಆಡಳಿತಕ್ಕೆ ಶುದ್ಧ ನೀರು, ಎಲ್ಲಾ ಸೇವೆಗಳಿಗೂ ಪ್ರವೇಶಾಧಿಕಾರ ಮುಂತಾದ ಬೇಡಿಕೆಯಿಡುವುದರೊಂದಿಗೆ ಅದೇ ಕಾಲದಲ್ಲಿ, ವರ್ಣದ್ವೇಶವನ್ನು ಕೊನೆಗೊಳಿಸಲು ಮತ್ತು ರಾಷ್ಟ್ರೀಯ ಸಂಧಾನವನ್ನು ಸಾಧಿಸಲು ಒಂದೇ ನಾಯಕತ್ವದಡಿ ಒಟ್ಟುಗೂಡಿದರು. ಈ ನಾಗರೀಕರ ಗುಂಪುಗಳು, ಯುನೈಟಡ್ ಡೆಮಾಕ್ರಟಿಕ್ ಫ್ರಂಟ್ ಎಂಬ ಹೆಸರಿನಲ್ಲಿ ಒಂದುಗೂಡಿ ಗ್ರಾಹಕ ಭಹಿಷ್ಕಾರ ಮುಂತಾದವುಗಳನ್ನು ರಚಿಸುವ ಚಾತುರ್ಯವುಳ್ಳ ಸ್ಥಳೀಯ ನಾಯಕರೊಂದಿಗೆ ಸೇರಿ ಅದೇಸಮಯದಲ್ಲಿ ದೊಡ್ಡ ಸಂಸ್ಥೆಗಳೊಂದಿಗೂ ಮತ್ತು ರಾಷ್ಟ್ರೀಯ ಅಭಿಯಾನ ನಾಯಕತ್ವದೊಂದಿಗೂ ಸಂಪರ್ಕಬೆಳೆಸಿದರು.

**2. ಕ್ರಿಯಯನ್ನು ನಡೆಸುವ ಯೋಜನೆ.**

ಪರಿಣಾಮಕಾರಿ ನಾಗರೀಕ ಪ್ರತಿಭಟನೆಯನ್ನು ರಚಿಸುವುದು ಸಾಮಾನ್ಯವಾಗಿ ಊಹಿಸುವುದಕ್ಕಿಂತ ಕ್ಲಿಷ್ಟವಾಗಿದೆ. ನಾಗರೀಕ ಪ್ರತಿಭಟನೆ ಎಂದೊಡನೆಯೆ ಜನರ ಮನಸ್ಸಿಗೆ ತೋಚುವುದು ಪ್ರತಿಭಟನೆ. ಆದರೆ ಇದು ನೂರಾರು ತಂತ್ರಗಳಲ್ಲಿ ಒಂದಾಗಿದೆ. ಅತ್ಯಂತ ಪರಿಣಾಮಕಾರಿಯಾದ ಅಭಿಯಾನವು ಈ ತಂತ್ರಗಳಲ್ಲಿ ಯಾವುದು, ಯಾವಾಗ, ಎಲ್ಲಿ, ಹೇಗೆ, ಯಾರಿಂದ, ಯಾರಮೇಲೆ, ಮತ್ತು ಯವ ಇತರ ತಂತ್ರಗಳೊಂದಿಗೆ ಸರಿಯಾಗಿ ಕೆಲಸಮಾಡುತ್ತದೆಂದು ತಿಳಿದುಕೊಂಡಿದೆ.

ಈ ಪ್ರಶ್ನೆಗಳಿಗೆ ಉತ್ತರವು ಸಾಕಷ್ಟು ಯೋಜನೆಗಳ ಮೂಲಕ ದೊರೆಯುತ್ತವೆ. ಅವು ಅಭಿಯಾನದ ವಿವರವಾದ ಪರಿಶೀಲನೆ, ಎದುರಾಳಿಗಳ ಬಲ, ಬಲಹೀನತೆ, ಅವಕಾಶಗಳು ಮತ್ತು ಬೆದರಿಕೆಗಳು, ಬಡಿದಾಟದ ಪರಿಸರದ ಪರಿಶೀಲನೆ, ಬಡಿದಾಟದ ಮೇಲೆ ಪರಿಣಾಮವುಂಟುಮಾಡುವಂತಹ ಮಧ್ಯವರ್ತಿ ಅಥವಾ ಸಂಬಂಧಪಡದ ಗುಂಪುಗಳು (ಅಂತರ್ರಾಷ್ಟ್ರೀಯ ಸಮೂಹದ ಸದಸ್ಯರನ್ನು ಒಳಗೊಂಡಂತೆ). ಈ ಮಾಹಿತಿಗಳಿಂದ ಚಳುವಳಿಗಳು ಪರಿಣಾಮಕಾರಿಯಾದ ಸಣ್ಣ -- ಮಧ್ಯಮ -- ಮತ್ತು ದೀರ್ಘ ಕಾಲದ ಧ್ಯೇಯಗಳನ್ನು ಮತ್ತು ಅನುರೂಪ ಕ್ರಿಯಾಯೋಜನೆಗಳನ್ನು ರೂಪಿಸಬಹುದು. ಈ ಯೋಜನೆಗಳು ಕಾಲಕ್ರಮದಲ್ಲಿ ಉಂಟಾಗುತ್ತವೆ. ಯೋಜನೆ ಮಾಡುವ ವಿಧಾನ ಮತ್ತು ಪಲ್ಗೊಳ್ಳುವವರ ಮನಸ್ಥಿತಿಯು ಒಂದು ಪ್ರತ್ಯೇಕ ಯೋಜನೆಗಿಂತ ಮುಖ್ಯವಾದುದು.

ಆಕಸ್ಮಿಕವಾಗಿ, ಒಂದು ಕ್ರಿಯಾಯೋಜನೆಯಲ್ಲಿಯೇ ನಾವು ಒಂದು ಬಡಿದಾಟದಲ್ಲಿ ಜಾಣ್ಮೆ ಹಾಗೂ ಪರಿಸ್ಥಿತಿಗಳ ಛೇದನೆಯನ್ನು ನೋಡಬಹುದು. ಕ್ರಿಯಾ ಯೋಜನೆಯ ಆಧಾರವು ಒಂದು ಅಭಿಯಾನವು ಎದುರಿಸುವ ಪರಿಸ್ಥಿತಿಯ ಅರಿವು - ಅನುಕೂಲ ಮತ್ತು ಪ್ರತಿಕೂಲ. ಚಳುವಳಿಯು ಅನುಕೂಲವಾದ ಪರಿಸ್ಥಿತಿಯನ್ನು ಬಳಸಲು, ಪ್ರತಿಕೂಲ ಪರಿಸ್ಥಿತಿಯನ್ನು ಜಾಣ್ಮೆ ಮತ್ತು ಯೋಜೆನೆಯ ಆಯ್ಕೆಗಳ ಮೂಲಕ ದಾಟಲು, ಬದಲಾಯಿಸಲು ತೀರ್ಮಾನಿಸುತ್ತದೆ.

1980ರಲ್ಲಿ ಪೋಲಂಡ್ನಲ್ಲಿ ನಡೆದ ಸಾಲಿಡರಿ ಅಭಿಯಾನವು ಕ್ರಿಯಾ ಯೋಜನೆಗೆ ಒಂದು ಉದಾಹರಣೆಯಾಗಿದೆ. ಅವರ ಬಲ ಹಾಗೂ ಸಾಮರ್ಥ್ಯಗಳನ್ನು ಅರಿತು ಕೆಲಸಗಾರರು ಸ್ವತಂತ್ರ ವ್ಯಾಪಾರ ಸಂಸ್ಥೆಯನ್ನು ರಚಿಸಲು, ಶಕ್ತಿಶಾಲಿ ಹಾಗೂ ರಾಜಕೀಯವಾಗಿ ವಾಸ್ತವವಾದ ಯೋಜನೆಯೊಂದನ್ನು ರಚಿಸಿದರು. (ಆದರೆ ಕಮ್ಯೂನಿಸ್ಟ್ ಆಡಳಿತವನ್ನು

© 2014 Peter Ackerman and Hardy Merriman

ಕೊನೆಗಾಣಿಸುವ ವಾಸ್ತವವಲ್ಲದ ಯೋಜನೆಯನ್ನು ಬಿಟ್ಟುಬಿಟ್ಟರು) ಕಾರ್ಮಿಕರನ್ನು ಆಯೋಜಿಸುವುದರಲ್ಲಿ ತಮ್ಮ ಬಲವನ್ನು ಕೇಂದ್ರೀಕರಿಸಿದರು. ವಿವಿಧ ಬಗೆಯ ಕೆಲಸಗಾರರ ಮಧ್ಯೆ ಐಕ್ಯಮತವನ್ನು ಸಾಧಿಸಿ ಅವರ ಎದುರಾಳಿಗಳ ಆರ್ಥಿಕ ಸಾಧ್ಯಗಳ ಹಾಗೂ ಅನ್ಯಾಯದ ವಿರುದ್ಧ ಹೋರಾಡಿದರು. ಅವರ ಕೆಲಸದ ಸ್ಥಳಗಳನ್ನು ಆಕ್ರಮಿಸಿಕೊಳ್ಳುವ ತಂತ್ರವನ್ನು ಹೂಡಿದರು. (ಕೆಲಸದ ಸ್ಥಳದಿಂದ ಹೊರಗೆಹೋಗುವ ಬದಲು, ಈ ರೀತಿ ಮಾಡಿರುವುದು ಕಳೆದ ವರುಷಗಳಲ್ಲಿ ಅವರ ಮೇಲೆ ಅತ್ಯಾಚಾರಕ್ಕೆ ಕಾರಣವಾಯಿತು). ಇತರ ಸಂಸ್ಥೆಗಳ ಮೇಲಿನ ಕೆಲಸಗಾರರ ಅವಲಂಬನೆಯು ಇದನ್ನು ಹೆಚ್ಚಿಸಿತು. - ಪ್ರತ್ಯೇಕವಾಗಿ ಮುದ್ರಣಾಲಯಗಳು ಮತ್ತು ಸ್ವತಂತ್ರ ಪತ್ರಿಕೆಗಳು- ನಗರಗಳ ಮಧ್ಯೆ ಸಂಪರ್ಕ ಬೆಳೆಸಲು ಕಳೆದ ದಶಕದಲ್ಲಿ ಬೆಳೆದುಬಂದ ಪತ್ರಿಕೆಗಳು. ಒಂದು ತಂತ್ರವನ್ನು ಆರಿಸುವ ಮೂಲಕ, ಸೂಕ್ತ ಗುರಿಯನ್ನು ಮತ್ತು ಸೂಕ್ತ ತಂತ್ರವನ್ನು ಅವರ ಸಾಮರ್ಥ್ಯಕ್ಕೆ ತಕ್ಕ, ಐಕ್ಯಮತ ಅಭಿಯಾನವು ಪರಿಣಾಮಕಾರಿಯಾಗಿ, ಬಡಿದಾಟ ಪರಿಸರವನ್ನು ಬೆಳಸಿ, ಪ್ರತಿಕೂಲ ಪರಿಸ್ಥಿತಿಯನ್ನು ದಾಟಿ, ತನ್ನ ಕೊನೆಯ ಗುರಿಯಾದ ಪ್ರಜಾಪ್ರಭುತ್ವ ರಾಜ್ಯವನ್ನು 1989ರಲ್ಲಿ ಸ್ಥಾಪಿಸಿತು.[12]

**3. ಅಹಿಂಸಾ ಶಿಸ್ತು**

ಅಹಿಂಸಾ ಶಿಸ್ತನ್ನು ಪಾಲಿಸುವುದು - ಎಷ್ಟೆ ಕೆಣಕಿದರು ಅಹಿಂಸಾ ಪೂರ್ವಕವಾಗಿರುವ ಒಂದು ತಂತ್ರವಾಗಿದೆ - ನಾಗರೀಕ ಪ್ರತಿಭಟನೆ ಕಾರ್ಯಾಚರಣೆಗೆ ಅತಿ ಮುಖ್ಯವಾಗಿದೆ. ಅಹಿಂಸಾ ಶಿಸ್ತಿನಿಂದ, ಚಳುವಳಿಗಳು ನಾಗರೀಕರ ಪಾಲ್ಗೊಳ್ಳುವಿಕೆಯನ್ನು ಅಧಿಕಗೊಳಿಸುತ್ತದೆ; ಎದುರಾಳಿಯ ನಿಗ್ರಹದ ಮೌಲ್ಯವನ್ನು ಹೆಚ್ಚಿಸುತ್ತದೆ; ನಿಗ್ರಹಕ್ಕೆ ವಿರೋಧ ಉಂಟಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ; ಎದುರಾಳಿಯ ಬೆಂಬಲಿಗರಿಂದ ಉಂಟಾಗುವ ನ್ಯೂನತೆಗಳ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಚೆನೊವೆತ್ ಮತ್ತು ಸ್ಟೀಫನ್ನರ ಸಂಶೋಧನೆಯಿಂದ, ಹಿಂಸಾ ಮತ್ತು ನಾಗರೀಕ ಪ್ರತಿಭಟನೆ ಅಭಿಯಾನಗಳ ನಡುವಿನ ಯಶಸ್ಸಿನ ವ್ಯತ್ಯಾಸದ ಮೇಲೆ ಇವುಗಳು ಪರಿಣಾಮಬೇರುತ್ತದೆಂದು ತಿಳಿಯುತ್ತದೆ.[13]

ಅಭಿಯಾನಗಳಿಗೆ ಅವರ ಬಡಿದಾಟವನ್ನು ಪರಿಣಾಮಕಾರಿಯಾಗಿಸಲು ನಾಗರೀಕರ ಪ್ರತಿಭಟನೆಯೆ ಉತ್ತಮ ಮಾರ್ಗ ಎಂಬ ವಿಶ್ವಾಸವೇ ಅಹಿಂಸಾ ಮಾರ್ಗವನ್ನು ಸಾಧಿಸಲು ಬೇಕಾಗಿದೆ. ನಾಗರೀಕ ಪ್ರತಿಭಟನೆಯು ಹೇಗೆ ಕೆಲಸ ಮಾಡುತ್ತದೆಂಬ ಮಾಹಿತಿ, ಐತಿಹಾಸಿಕ ದಾಖಲೆಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಬಹುದು. ಪರಿಣಾಮಕಾರಿಯಾದ ತಂತ್ರಗಳು ಕಾಲಕ್ರಮದಲ್ಲಿ ಯಶಸ್ಸನ್ನು ಗಳಿಸಿಕೊಡುತ್ತದೆ ಹಾಗೂ ನಾಗರೀಕ ಪ್ರತಿಭಟನೆಯು ಕೆಲಸಮಾಡುತ್ತದೆಂಬುದನ್ನು ತೋರಿಸುತ್ತದೆ. ಅಭಿಯಾನಗಳ ಅಹಿಂಸಾ ಶಿಸ್ತನ್ನು ಪಾಲಿಸಲು ಸಂಸ್ಕೃತಿ ಹಾಗೂ ಆದರ್ಶವನ್ನು ಬೆಳಸಿಕೊಳ್ಳಬೇಕು. ಉದಾಹರಣೆಗೆ, ಸ್ಲೊಬೊಡನ್ ಮಿಲೊಸ್ವಿಕ್ ಅನ್ನು ಓಡಿಸಿದ ಸೆರ್ಬಿಯಾದ ಓತ್ಪರ್ ಅಭಿಯಾನವು ಹೊಸ ಸದಸ್ಯರಿಗೆ ಕ್ರಮಬದ್ಧವಾಗಿ, ತರಭೇತಿ ನೀಡಿ ಹೇಗೆ ನಾಗರೀಕ ಪ್ರತಿಭಟನೆಯು ಕೆಲಸಮಾಡುತ್ತದೆಂದೂ ಅಹಿಂಸಾ ಮಾರ್ಗದಲ್ಲಿ ಉಳಿಯುವುದು ಏಕೆ ಮುಖ್ಯ ಎಂಬುದರ ಬಗ್ಗೆ ಅರಿವು ಮೂಡಿಸಿತು.

© 2014 Peter Ackerman and Hardy Merriman

ಇಂತಹ ಪರಿಶ್ರಮಗಳಿಗೆ ಮತ್ತು ಅಹಿಂಸಾ ಮಾರ್ಗದಲ್ಲಿ ಉಳಿಯಲು ಧರ್ಮಸಿದ್ಧಾಂತ ಮಾಡಲು ಅಭಿಯಾನವು ಬೇಕಿಲ್ಲ; ಆದರೆ ಜನರು ಪರಸ್ಪರ ಅಹಿಂಸಾ ಶಿಸ್ತಿನ ಪ್ರಾಯೋಗಿಕ ಪ್ರಯೋಜನಗಳ ಬಗ್ಗೆ ತಿಳಿಸಿಕೊಳ್ಳಬೇಕು. ಈ ಸಮಯದಲ್ಲು ಹೆಂದೆ ನಡೆದ ಕೆಲವು ಘಟನೆಗಳನ್ನು ನೆನೆಪಿಸಿಕೊಳ್ಳಬೇಕು (ಸಿರಿಯಾನಲ್ಲಿ ನಡೆದ ದುಃಖಕರವಾದ ಘಟನೆ) ಇಲ್ಲಿ ಅಸಹನೆ ಅಥವಾ ನಾಗರೀಕ ಪ್ರತಿಭಟನೆಯಲ್ಲಿ ಅಪನಂಬಿಕೆಗಳು ಹಿಂಸಾಚಾರಕ್ಕೆ ಎಡೆಮಾಡಿಕೊಟ್ಟಿದೆ. ಇದರಿಂದ ದುಶ್ಪರಿಣಾಮವು ಉಂಟಾಗಿದೆ.

**4. ನಾಗರೀಕ ಪ್ರತಿಭಟನೆಯಲ್ಲಿ ಪ್ರಜೆಗಳ ಭಾಗವಹಿಸುವಿಕೆ.**

ನಾಗರೀಕ ಪ್ರತಿಭಟನೆಯಲ್ಲಿ, ನಾಗರೀಕರ ಹೆಚ್ಚಿನ ಪಾಲ್ಗೊಳ್ಳುವಿಕೆಯೆ ಅದರೆ ಯಶಸ್ಸಿಗೆ ಬಹು ಮುಖ್ಯ ಕಾರಣವಾಗಿದೆ.[14] ಇದರಲ್ಲಿ ಹೆಚ್ಚಿನ ಪ್ರಜೆಗಳು ಅಧಿಕಾರವನ್ನು ಮೀರಲು ಒಪ್ಪುತ್ತಾರೆ ಮತ್ತು ಅಧಿಕಾರಕ್ಕೆ ಮಣಿಯುವುದು ನಿಲ್ಲಿಸಲ್ಪಡುತ್ತದೆ. ಇದರಿಂದ ಅಧಿಕಾರವರ್ಗವು ದುರ್ಬಲಗೊಳ್ಳುತ್ತದೆ. ನಾಗರೀಕರ ಹೆಚ್ಚಿನ ಪಾಲ್ಗೊಳ್ಳುವಿಕೆಗೆ ನಿಗ್ರಹಕ್ಕೆ ವಿರೋಧವನ್ನು ಹೆಚ್ಚಿಸುವ ಸಾಧ್ಯತೆಯಿದೆಯೆಂದು ನಾವು ನಂಬಿದ್ದೇವೆ; ಅನೇಕ ಪುರಾವೆಗಳು ಇದನ್ನು ಸಾಭೀತು ಪಡಿಸುತ್ತವೆ. ಹೆಚ್ಚಿನ ನಾಗರೀಕರ ಪಾಲ್ಗೊಳ್ಳುವಿಕೆಯಿಂದ ಎದುರಾಳಿಗಳ ಪಕ್ಷದವರಿಂದ ನ್ಯೂನತೆಗಳು ಹೆಚ್ಚಾಗುತ್ತವೆ.[15]

ನಾಗರೀಕರ ಪಾಲ್ಗೊಳ್ಳುವಿಕೆಯ ಹೆಚ್ಚಳವಿರುವ ಉದಾಹರಣೆಗಳು; 2011 ರ ಈಜಿಪ್ಟ್ನ ಕ್ರಾಂತಿ, ಮತ್ತು ವಿವಿಧ ಜನಾಂಗದ ಗುಂಪುಗಳ ಬೆಂಬಲವನ್ನು ತುನಿಶಿಯಾ ಗಳಿಸಿತು (ಪುರುಷರು ಮತ್ತು ಮಹಿಳೆಯರು; ಧಾರ್ಮೀಕ ಮತ್ತು ಲೌಕೀಕ ಗುಂಪುಗಳು; ಯುವ, ಮಧ್ಯಮ ವಯಸ್ಕ, ವೃದ್ಧ ಜನರು; ಕೆಳಮಟ್ಟದ- ಮಧ್ಯಮ -ವರ್ಗದ ಕೆಲಸಗಾರರು; ಗ್ರಾಮೀಣದ ಮತ್ತು ಪಟ್ಟಣದ ಜನರು). ಇದಕ್ಕೆ ವಿರೋಧವಾಗಿ 1989ರ ಚೀನಾದ ವಿದ್ಯಾರ್ಥಿ ಚಳುವಳಿ ಮತ್ತು 2009 ರ ಹಸಿರು ಅಭಿಯಾನಗಳು ಮಿಲ್ಲಿಯನ್ ಸಂಖ್ಯೆಯ ಜನರನ್ನು ಒಟ್ಟುಗೂಡಿಸು ಮುಂಚೂಣಿಯಲ್ಲಿ ಬಂದಿತು. ಆದರೆ ಅದರ ಕೊನೆಯ ಗುರಿಯನ್ನು ತಲುಪಲಿಲ್ಲ ಏಕೆಂದರೆ ಅವರ ಸ್ಥಳೀಯ ಜನರನ್ನು ಹೊರತುಪಡಿಸಿ ಬೇರೆ ನಾಗರೀಕರ ಪಾಲ್ಗೊಳ್ಳುವಿಕೆಯನ್ನು ಅದು ಒಳಗೊಂಡಿಲ್ಲ.

ನಾಗರೀಕ ಪ್ರತಿಭಟನೆಯಲ್ಲಿ ಹೆಚ್ಚಿನ ಪಾಲ್ಗೊಳ್ಳುವಿಕೆಯನ್ನು ಸಾಧಿಸುವುದೆ ತಪಶೀಲಪಟ್ಟಿಯಲ್ಲಿನ ಮೊದಲ ಮೂರು ವಸ್ತುಗಳ ಫಲಿತಾಂಶವಾಗಿದೆ. ಒಗ್ಗಟ್ಟಿನ ದರ್ಶನವು ಸಂಬಂಧವನ್ನು ಬೆಳೆಸಿ ಒಗ್ಗಟ್ಟಿನ ಬೆಳೆಸುವುದರಲ್ಲಿದೆ. ಕ್ರಿಯಾ ಯೋಜನೆಯು ವಿಶ್ವಾಸವನ್ನು ತುಂಬಿ, ತಂತ್ರಗಾರಿಕೆಯನ್ನು ನೀಡಿ, ವಿವಿಧ ಜನರ ಆಪತ್ತನ್ನು ಎದುರಿಸುವ ಸಾಮರ್ಥ್ಯಕ್ಕೆ ಎಡೆಮಾಡಿ, ನಿರ್ದಿಷ್ಟ ಸಮಯದಲ್ಲಿ, ಅಭಿಯಾನಕ್ಕಾಗೆ ತ್ಯಾಗಮಾಡುವ ಸಾಮರ್ಥ್ಯವನ್ನು ಬೆಳೆಸುತ್ತದೆ. ಉತ್ತಮ ತಂತ್ರವು ಬಡವರಿಗೆ, ಶ್ರೀಮಂತರಿಗೆ, ಯುವಕರಿಗೆ, ವೃದ್ಧರಿಗೆ, ಮಧ್ಯವಯ್ಸ್ಕರೆಲ್ಲರಿಗೂ ಏನನ್ನಾದರೂ ಮಾಡುವ, ಚಿಕ್ಕದಾಗಿಯೋ ಅಥವಾ ದೊಡ್ಡದಾಗಿಯೋ ಮಾಡುವ ಅಭಿಯಾನವನ್ನು ಬೆಳೆಸಲು ಆಯ್ಕೆಗಳನ್ನು ನೀಡುತ್ತದೆ. ಅಹಿಂಸಾ ಶಿಸ್ತು ಎಲ್ಲರ ಪಾಲ್ಗೊಳ್ಳೂವಿಕೆಯನ್ನೂ ದೃಢಪಡಿಸುತ್ತದೆ. (ಹಿಂಸಾಪದ್ಧತಿಯಲ್ಲಿ ಆಯುಧಗಳನ್ನು ಉಪಯೋಗಿಸುವ ಪುರುಷರಿಗೆ ಮಾತ್ರ ಎಂಬುದರ ಬದಲು) ಮತ್ತು ಅಹಿಂಸಾ ಮಾರ್ಗವು ಸಮಾಜದ ಎಲ್ಲಾ ವರ್ಗದವರೂ ಒಪ್ಪುವಂತಿರುತ್ತದೆ.

### 5. ನಿಗ್ರಹ ಕಡಿಮೆಯಾಗುವ ಪರಿಣಾಮ, ಮತ್ತು ವಿರೋಧದ ಹೆಚ್ಚಳ

ಸರ್ವಾಧಿಕಾರಿಗೆಯಿರುವ ಅತ್ಯಂತ ಶಕ್ತಿಯುತ ಆಯುಧವು ನಿಗ್ರಹವನ್ನುಂಟುಮಾಡುವುದಾಗಿದೆ; ಪರಿಣಾಮಕಾರಿ ಅಭಿಯಾನಗಳು ನಿಗ್ರಹವನ್ನು ಕಡಿಮೆಗೊಳಿಸುವುದೇಹೆಂದು ಕಲಿತಿವೆ. ಹೀಗೆ ಅದರ ಬೆಲೆಯನ್ನು ಹೆಚ್ಚಿಸುತ್ತದೆ. ಇದನ್ನು ಸರಿಯಾದ ಆಪತ್ತಿನ ಪರಿಶೀಲನೆಯ ಮತ್ತು ತಂತ್ರದ ಆಯ್ಕೆಯ ಮೂಲಕ ಸಾಧಿಸುತ್ತಾರೆ; ಎಲ್ಲಾ ತಂತ್ರಗಳೂ ಸಮಾನವಾಗಿ ನಿಗ್ರಹವನ್ನು ಎದುರಿಸುವುದಿಲ್ಲ.

ರಾಶಿ ಪ್ರದರ್ಶನವಂತಹ ಕೇಂದ್ರೀಕೃತ ಕ್ರಿಯೆಗಳು ನಿಗ್ರಹವನ್ನು ಎದುರಿಸುತ್ತವೆ; ಕೇಂದ್ರೀಕೃತವಲ್ಲದ ತಂತ್ರಗಳಾದ ಭಹಿಷ್ಕಾರ, ಮನೆಯಿಂದ ಮಾಡುವ ಮುಷ್ಕರಗಳು, ಶಾಲಿಯಿಂದ ಸಿಕ್-ಇನ್ಗಳು, ಅಥವಾ ಸಾರ್ವಜನಿಕದ ಸ್ಥಳಗಳಲ್ಲಿ ಚಿಕ್ಕ ಚಿಹ್ನೆಗಳ ರಹಸ್ಯ ಪ್ರದರ್ಶನಗಳು ಇತ್ಯಾದಿಗಳನ್ನು ನಿಗ್ರಹಕ್ಕೆ ಒಳಪಡಿಸುವುದು ಸರ್ವಾಧಿಕಾರಿಗಳಿಗೆ ಕಠಿಣವಾಗಿರುತ್ತವೆ. ಏಕೆಂದರೆ, ಕೆಲವು ತಂತ್ರಗಳಲ್ಲಿ ಭಾಗವಹಿಸುವವರು (ಗ್ರಾಹಕ ಭಹಿಷ್ಕಾರಗಳು) ಹೊರಗೆ ಕಾಣುವುದಿಲ್ಲ. (ನೋಡಿದ ತಕ್ಷಣ ಅವರು ಒಂದು ವಸ್ತುವನ್ನು ಭಹಿಷ್ಕರಿಸುವುದನ್ನು ಹೇಳಲು ಸಾಧ್ಯವಿಲ್ಲ) ಅಥವಾ ತಂತ್ರವನ್ನು ಹೂಡಿದವರು ಅದನ್ನು ಅಲ್ಲಗೆಳೆಯುತ್ತಾರೆ. (ಮನೆಯಿಂದ ಮಾಡುವ ಮುಷ್ಕರಕ್ಕೆ ಆರಕ್ಷಕರು ಬಂದು ಪ್ರತಿ ಕೆಲಸಗಾರರನ್ನು ಪರಿಕ್ಷಿಸುವುದು ಅಗತ್ಯವಾಗಿದೆ. ಮತ್ತು ಸಿಕ್-ಇನ್ ಗಳಲ್ಲಿ ಭಾಗವಹಿಸುವವರು ತಾವು ಆದಿನ ಅಸ್ವಸ್ಥರೆಂದು ಸಾಭೀತು ಪಡಿಸಬಹುದು).

1983 ಯಲ್ಲಿ ಚಿಲಿಯಲ್ಲಿ, ರಾಜಕೀಯ ಮತಭೇದವುಳ್ಳವರು ಅಗಸ್ಟೊ ಪಿನೊಚೆಟ್ನ ಸರ್ವಾಧಿಕಾರವನ್ನು ದಿಕ್ಕರಿಸಿದವರು ಅವನ ನಿಗ್ರಹವನ್ನು ಎದುರಿಸಲು ಒಂದು ದಾರಿಯನ್ನು ಹುಡುಕಬೇಕಾಯಿತು. ಒಂದು ದಶಕದ ಗುಂಪು ಪ್ರತಿಬಂಧನಗಳು, ಗಲ್ಲಿಗೇರಿಸುವುದು, ಅತ್ಯಾಚಾರ, ಮತ್ತು ಮಾಯವಾಗುವಿಕೆಗಳು ಜನರನ್ನು ಹೆದರಿಕೆಯಿಂದ ಒಟ್ಟುಗೂಡದಂತೆ ಮಾಡಿದವು. ಏಪ್ರಲ್ನಲ್ಲಿ, ತಾಮ್ರ ಗಣಿಕಾರ್ಮಿಕರು ಸಾಂಟಿಯಾಗೊ ದ ಹೊರಗೆ ಮುಷ್ಕರವನ್ನು ಏರ್ಪಡಿಸಿದಾಗ, ಪಿನೊಚಟನು ಕೊಲೆ ಬೆದರಿಕೆಯನ್ನು ತನ್ನ ಅನುಯಾಯಿಗಳ ಮೂಲಕ, ಮುಷ್ಕರ ಪ್ರಾರಂಭಿಸುವ ಮೊದಲೇ ಕಳುಹಿಸಿದನು. ಇಂತಹ ನಿಗ್ರಹದಲ್ಲಿ, ಕಾರ್ಮಿಕ ನಾಯಕರು ಮುಷ್ಕರವನ್ನು ನಿಲ್ಲಿಸಿದರು. ಅದರಬದಲು ರಾಷ್ಟ್ರೀಯ ಪ್ರತಿಭಟನಾ ದಿವಸಕ್ಕೆ ಕರೆ ನೀಡಿದರು. ಇದರಲ್ಲಿ ಭಾಗವಹಿಸುವವರು ನಿಧಾನವಾಗಿ ಹೊರಗೆ ನಡೆದು, ನಿಧಾನವಾಗಿ ವಾಹನ ಚಲಿಸಿ, ನಿಧಾನವಾಗಿ ಕೆಲಸ ಮಾಡಿ, ರಾತ್ರಿ ಎಂಟು ಗಂಟೆಗೆ ಕೊಡಗಳು ಮತ್ತು ತಟ್ಟೆಗಳನ್ನು ಒಡೆಯುತ್ತಾರೆ.[16] ಈ ತರಹದ ಕ್ರಿಯೆಗಳಲ್ಲಿ ಹೆಚ್ಚಾಗಿ ಭಾಗವಹಿಸುವಿಕೆ ಕಂಡುಬಂದಿತು. ಇದು ಮಾಸಿಕ ಮುಷ್ಕರಕ್ಕೆ ಕರೆ ನೀಡಿತು. ಭಯವನ್ನು ಹೊಗಲಾಡಿಸಲು ಇದು ಮೊದಲನೆಯ ಹಂತವಾಯಿತು. ಪಿಂಚಟ್ನ ಆಡಳಿತದಲ್ಲಿ ಇದು ಒಂದು ಭಾಗವಾಗಿದೆ. ಈ ಕ್ರಿಯಯಲ್ಲಿ ಭಾಗವಹಿಸುವವರಿಗೆ ಕಡಿಮೆ ಆಪತ್ತುಗಳಿದ್ದವು; ಅವರು ನಿಗ್ರಹಕ್ಕೆ ಒಳಗಾಗಲಿಲ್ಲ. ಪಿನ್ಚಟ್ನ ಕಾವಲು ಪಡೆಗೆ ಇದಕ್ಕೆ ವಿರುದ್ಧ ಏನೂ ಮಾಡಲಾಗಲಿಲ್ಲಿ.

ನಿಗ್ರಹವನ್ನು ಕಡಿಮೆ ಗೊಳಿಸಲು ಇತರ ತಂತ್ರಗಳು, ಅಥವಾ ಅದರ ಬೆಲೆಯನ್ನು, ವಿರೋಧದ ಸಾಧ್ಯತೆಯನ್ನು ಹೆಚ್ಚಿಸುವುದರಲ್ಲಿ, ರಾಜಕೀಯ ಶಬ್ಧಗಳಲ್ಲಿ ಕೆಲವು ಸಂಕಟಗಳನ್ನು ತೋಡಿಕೊಳ್ಳುವುದು, (ಆಡಳಿತ ಬೀಳಗೆ ಸಂಬಂಧಿಸಿದ ವಿಚಾರಗಳಿಗೆ ಬದಲು ಪ್ರದರ್ಶಕರು ಶುದ್ಧ ನೀರು ಮತ್ತು ಸುರಕ್ಷಿತ ಅಕ್ಕಪಕ್ಕದವರಿಗೆ ಕರೆ ನೀಡಿದರು)

ನಾಯಕತ್ವದ ಸಂತತಿಗೆ ಸರಿಯಾದ ಮಾರ್ಗದರ್ಶನವನ್ನು ರೂಪಿಸುವುದು, ಅಭಿಯಾನದಲ್ಲಿ ಭಾಗವಹಿಸುವವರ, ಸ್ಥಳೀಯ ಮತ್ತು ಅಂತರ್ರಾಷ್ಟ್ರೀಯ ಗುಂಪುಗಲ ಮಧ್ಯೆಯಿರುವ ವ್ಯತ್ಯಾಸಗಳನ್ನು ಕಳೆಯುವುದು. ಇದರಿಂದ ನಿಗ್ರಹಕ್ಕೆ ವಿರೋಧವು ಖಾತ್ರಿಯಾಗುತ್ತದೆ. ಉದಾಹರಣೆಗೆ, ಇಜಿಪ್ಶಿಯನ್ ಬ್ಲಾಗ್ಗರ್ ಖಲಡ್ ಸೆಡ್ ಎಂಬುವನು ಭ್ರಷ್ಟಾಚಾರಕ್ಕೆ ವಿರೋಧಿಸಿದ್ದಕ್ಕಾಗಿ, 2010 ರಲ್ಲಿ ಇಂಟರ್ನೆಟ್ ಕಪೆ ಯಿಂದ ಎಳೆದು ತಂದು ಕಾವಲು ಪಡೆಗೆ ಸೇರಿದವರು ಅವನನ್ನು ಸಾಯುವಂತೆ ಹೊಡೆದರು. ಇದಕ್ಕೆ ಡಿದ್ದಿಡೆಂಟ್ ಫೇಸ್ಬುಕ್ ಗುಂಪು "ನಾವೆಲ್ಲರೂ ಖಲೆಡ್ ಸೆಡ್" ಎಂದು ಹೇಳಿ ಇಜಿಪ್ಶಿಯನ್ ಸರ್ಕಾರದ ವಿರುದ್ಧ ಧ್ವನಿ ಎತ್ತಿದರು. ಅವರ ಭಾಗವಹಿಸುವೆಯ ಮೂಲಕ, ಸೆಡ್ ಹೇಳಿರುವ ವಿಚಾರವು ಸಾಮಾನ್ಯ ಇಜಿಪ್ಶಿಯನ್ನರ ಮನಸ್ಸಿನಲ್ಲಿದೆ ಎಂದು ಸಾಭೀತುಪಡಿಸಿದರು. ಈ ಮೂಲಕ ನಿಗ್ರಹಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು.

**6. ಚಳುವಳಿಯ ಎದುರಾಳಿಯಿಂದ ಕೊರತೆಯ ಹೆಚ್ಚಳ.**

ನಾಗರೀಕ ಪ್ರತಿಭಟನೆಯು ಮುಂದುವರೆದಂತೆ, ರಾಜನಿಷ್ಠೆಯು ಬದಲಾಗುವುದನ್ನು ನೋಡಬಹುದು. ಮತ್ತು ಎದುರಾಳಿಗಳ ಸಕ್ರಿಯ ಮತ್ತು ನಿಷ್ಕ್ರಿಯ ಬೆಂಬಲಿಗರ ನ್ಯುನತೆಗಳು ಹೆಚ್ಚಾಗುತ್ತವೆ. ಉದಾಹರಣೆಗೆ, ಸರ್ಕಾರದ ಕ್ರಾಂತಿಕಾರರು ಹಿಡಿತವನ್ನು ಸಾಧಿಸಲು ಪರಸ್ಪರ ಸಾರ್ವಜನಿಕವಾಗಿ ಹೊಡೆದಾಡಲು ಮುಂದಾಗುತ್ತಾರೆ. ಆರ್ಥಿಕ ಆಸಕ್ತಿಗಳು ರಾಜ್ಯವನ್ನು ಒಂದು ಅಭಿಯಾನದ ಪರವಾಗಿ ನಿಲ್ಲಲು ಒತ್ತಾಯಿಸುತ್ತದೆ. ಈ ರೀತಿಯಾಗಿ ವ್ಯಾಪರವು ಮರಳುತ್ತವೆ. ಆಡಳಿತದ ಅಂಗವಾದ ಆರಕ್ಷಕರು, ಅಧಿಕಾರಿಗಳು, ಸೇನಾಪಡೆ ವೀರರು, ಮತ್ತು ಇತರರೂ ಸಹ ರಾಜನಿಷ್ಠೆಯನ್ನು ಬದಲಾಯಿಸುವ ಸಾಧ್ಯತೆಯಿದೆ. ಏಕೆಂದರೆ ಬಹುಶಹ ಅವರು ಅಭಿಯಾನದ ಬೇಡಿಕೆಗೆ ತುತ್ತಾಗಿರುತ್ತಾರಬಹುದು. ಆಡಳಿತದಿಂದ ಬೇಸತ್ತು ಅಥವಾ ಅವರ ಕುಟುಂಬದವರು ಅಥವಾ ಸ್ನೇಹಿತರು ನಾಗರೀಕ ಪ್ರತಿಭಟನೆಯಲ್ಲಿ ಭಾಗವಹಿಸುವವರಾಗಿರಬಹುದು. ಆಡಳಿತದ ಮೇಲೆ ಅನುಕಂಪವುಳ್ಳ ಮೇಲ್ವರ್ಗದವರೂ ಸಹ ಅದರ ಮುಂದುವರೆಯುವಿಕೆಯ ಮೇಲೆ ಸಂಶಯ ಪಡಲಾರಂಭಿಸಬಹುದು. ಇದರಿಂದ ನಾಗರೀಕ ಪ್ರತಿಭಟನೆ ಗೆದ್ದ ಪಕ್ಷದಲ್ಲಿ ಅವರು ಸೋತ ಪಕ್ಷದಲ್ಲಿರಬಾರದೆಂಬ ಕಾರಣಕ್ಕೆ ಅವರು ಮಧ್ಯಸ್ಥರಾಗಿ ಬದಲಾಗಬಹುದು.

2004 ರ ಉಕ್ರೈನ್ನ ಕಿತ್ತಳೆ ಕ್ರಾಂತಿಯಲ್ಲಿ, ಒಪ್ಪದವರು ಕಾವಲು ಪಡೆಯೊಂದಿಗೆ ನಿವೃತ್ತಿಹೊಂದಿದ ಆರಕ್ಷಕರನ್ನು ಮಧ್ಯವರ್ತಿಗಳಾಗಿರಿಸಿಕೊಂಡು ಸಂಪರ್ಕಬೆಳೆಸಿದರು ಕಾಲಕ್ರಮದಲ್ಲಿ, ಎದುರಾಳಿಗಳು ಅವರ ಕಾರ್ಯಗಳಿಂದ ಅವರು ಅಹಿಂಸಾ ಹಾಗೂ ನ್ಯಾಯವಾಧಿಗಳೆಂದು ತಿಳಿದಿತು.[17] ಅವರು ರಕ್ಷಣಾಪಡೆಯನ್ನು ಸಾರ್ವಜನಿಕರ ರಕ್ಷಣೆಗಾಗಿ ಕಳುಹಿಸಿದರು. ಸಮಾಜದ ಬಿರುಕುಗಳನ್ನು ಒಮ್ಮತಗಳು, ಸ್ಲೋಗನ್ಗಳು ಮತ್ತು ಕಾರ್ಯಗಳಿಂದ ತುಂಬಿದರು. (ಆರಕ್ಷಕರಿಗೆ ಗುಲಾಬಿ ಹೂವನ್ನು ನೀಡುವುದು) ಅಶಕ್ತ ಆಡಳಿತದ ಭ್ರಷ್ಟಾಚಾರಗಳನ್ನು ತಿಳಿಸಿದರು; ರಕ್ಷಣಾ ಪಡೆಯಲ್ಲಿದ್ದ ರಾಜನಿಷ್ಠೆ ಬದಲಾವಣೆಗಳನ್ನು ಸರಿಪಡಿಸಿದರು. ನಿಗ್ರಹದ ಸಮಯ ಬಂದಾಗ, ಅನೇಕ ಉಕ್ರೈನಿಯನ್ ಸಿಪಾಯಿ ಮತ್ತು ಆರಕ್ಷಕರು ಸುಮ್ಮನಾದರು. ಸರ್ಬಿಯಾದಲ್ಲಿಯೂ ಮಿಲೊಸೆವಿಕ್ ನ ಆಡಳಿತದಲ್ಲಿಯೂ ಇದೇ ರೀತಿಯಾಯಿತು. ಯಾವುದೇ ವಿರೋಧವಿಲ್ಲದೆ, ಸೇನಾ ಪಡೆಗಳು ಆಡಳಿತದ ಆಜ್ಞೆಗಳನ್ನು ಪಾಲಿಸದೆ ಸುಮ್ಮನಿದ್ದರು. ಅಕ್ಟೋಬರ್, ಒಟ್ಬೊರ್ ಚಳುವಳಿಯ ಕೊನೆಯ ಹಂತದಲ್ಲಿ, ಹೆಲಿಕಾಪ್ಟರ್ನ ಮೂಲಕ, ಬೆಲ್ಗ್ರೇಡ್ ಗುಂಪಿನ ಮೇಲೆ ರಾಸಾಯನವನ್ನು ಹಾಕಲು ನಿಯೋಜಿಸಿದ ಆರಕ್ಷಕ ಅಧಿಕಾರಿಯು ಹಾಗೆ ಮಾಡಲು ನಿರಾಕರಿಸಿದನು. ಅದಕ್ಕೆ ಅವನಿಗೆ ಗುಂಪಿನ

ಸರಿಯಾದ ದೃಷ್ಟಿಯೂ, ಆ ದಿನ ಬಿಸಿಲಾಗಿದ್ದರೂ ಸಹ, ವಾತವರಣದೋಶದಿಂದ ಸಿಗುತ್ತಿಲ್ಲವೆಂಬ ಕಾರಣವನ್ನು ನೀಡುತ್ತಾನೆ. ನಂತರ, ಅವನು ತನ್ನ ಕುಟುಂಬದವರು ಆ ಗುಂಪಿನಲ್ಲಿರಬಹುದೆಂದು ಊಹಿಸಿದ ಕಾರಣ ಆಜ್ಞೆಯನ್ನು ಪಾಲಿಸಲಾಗಲಿಲ್ಲ ಎಂದು ಹೇಳಿಕೆ ನೀಡಿದನು.[18]

ಮತ್ತೊಬ್ಬರ ಕಡ್ಡಾಯದಿಂದಲೋ ಅಥವಾ ಸ್ವಯಮ್ಪ್ರೇರಿತವಾಗಿಯೋ ಈ ರೀತಿಯಾದ ನ್ಯೂನತೆಗಳು ನಾಗರೀಕ ಪ್ರತಿಭಟನೆಯ ದೀರ್ಘಕಾಲದ ಪರಿಣಾಮಗಳಾಗಿವೆ. ಹಿಂದಿನ ಎರಡು ತಪಶೀಲಪಟ್ಟಿಯ ಪ್ರವೃತ್ತಿಗಳಂತೆ, ಈ ಪ್ರವೃತ್ತಿಯೂ ಒಂದು ಅಭಿಯಾನದ ಒಟ್ಟುಗೂಡಿದ ಪ್ರಜೆಗಳಿಂದ, ಯೋಜನೆ ಮತ್ತು ಅಹಿಂಸಾಶಿಸ್ತಿನಿಂದ ಉಂಟಾಗುತ್ತವೆ. ನ್ಯೂನತೆಗಳ ಹೆಚ್ಚಳ, ಒಗ್ಗಟ್ಟು, ಯೋಜನೆ, ಅಹಿಂಸಾ ಶಿಸ್ತು ಮುಂತಾದವು ಹೆಚ್ಚಿನ ಭಾಗವಹಿಸುವಿಕೆಗೆ ಕಾರಣವಾಗಿದೆಯೆಂದು ಮಾಹಿತಿಗಳು ತಿಳಿಸುತ್ತವೆ. ಪ್ರತ್ಯೇಕವಾಗಿ, ಅಹಿಂಸಾ ಶಿಸ್ತು ನ್ಯೂನತೆಗಳನ್ನು ಹೆಚ್ಚಿಸಲು ಮುಖ್ಯವಾಗಿದೆ. ಎಷ್ಟುಕಾಲ ಅಹಿಂಸೆ ಯಿಂದ ಅಭೀಯಾನವು ನಡೆಯುತ್ತದೆಯೋ ಅಷ್ಟುಕಾಲ ನ್ಯೂನತೆಗಳನ್ನು ಇರಿಸಿಕೊಳ್ಳಬಹುದು. (2011 ರ ಸಿರಿಯಾದಲ್ಲಿನ ದುಃಖಕರ ಘಟನೆ). ಆಡಳತದೊಳಗೆ, ರಾಜನೀತಿಯ ಬದಲಾವಣೆಗಳು ಹಿಂಸಾಚಾರದಿಂದ ಬೆದರಿಕೆಗೆ ಒಳಗಾಗದಿರುವಾಗ, ಅಧಿಕಾರದ ಹಿಡಿತಕ್ಕೆ ನ್ಯೂನತೆ ಸಾಧ್ಯತೆಯಿಂದ ಬೆದರಿಕೆಗಳು ಸತತವಾಗಿರುತ್ತವೆ.

## ಹೊರ ಕಾರ್ಯಾಚರರಿಗೆ ತೊಡಕುಗಳು

ಈ ತಪಶೀಲಪಟ್ಟಿಯು ಒಪ್ಪದವರಿಗೆ ಮಾತ್ರ ಮಾರ್ಗದರ್ಶಿಯಾಗಿಲ್ಲ. ಬೇರೆ ವರ್ಗದವರೂ ಇದನ್ನು ಅಲವಡಿಸಿ ಕಾರ್ಯಚರಣೆಯಲ್ಲಿ ಯಶಸ್ಸನ್ನು ಕಾಣಬಹುದು. ಉದಾಹರಣೆಗೆ, ನಾಗರೀಕ ಪ್ರತಿಭಟನೆಯ ಮೇಲೆ ಪತ್ರಿಕೋಧ್ಯಮಿಗಳು ಹೆಚ್ಚು ಪರಿಣಾಮಕಾರಿಯಾಗಿ ಲೇಖನಗಳನ್ನು ನೀಡಿದ್ದಾರೆ. ಪತ್ರಿಕೋಧ್ಯಮಿಗೆ ಒಂದು ಬಡಿದಾಟದವನ್ನು ಹೊಳಹೊಕ್ಕು ನೋಡಬೇಕಾದರೆ, 2014ರ ಪ್ರಾರಂಭದಲ್ಲಿ, ಮಾಲ್ಟೊವ್ ಕಾಕ್ಟೆಯಿಲ್ನ ಉರಿಯುತ್ತಿರುವ ಗುರಿಹಲಗೆಯ ಮುಂದೆ ವರದಿಗಾರರನ್ನು ನಿಲ್ಲಿಸಿರುವುದನ್ನು ಈ ತಪಶೀಲ ಪಟ್ಟಿಯು ಸೂಚಿಸುತ್ತದೆ. ಆದ್ದರಿಂದ ಈ ಹಿಂಸೆಯು ಯಾವ ಪರಿಣಾಮವನ್ನು ಬೀರುತ್ತದೆಂದು ಸರಿಯಾಗಿ ಊಹಿಸಲು ಸಾಧ್ಯವಾಗುತ್ತದೆ. ಆದರೆ, ಒಂದು ಚಳುವಳಿಯ ಒಗ್ಗಟ್ಟು ಮತ್ತು ಯೋಜನೆಯ ಮೇಲಿನ ತಣಿಕೆಯು ಅಹಿಂಸೆ ಶಿಸ್ತಿನಲ್ಲಿ ಒಡೆತದ ಮೂಲ, ನಾಗರೀಕರ ಭಾಗವಹಿಸುವಿಕೆಯಲ್ಲಿ ಹೆಚ್ಚಳ, ಒಂದು ಚಳುವಳಿಯ ಮೇಲೆ ನಿಗ್ರಹದ ಪರಿಣಾಮವು ಕಡಿಮೆಯಾಗುತ್ತಿರುವುದು, ರಕ್ಷಣಾ ಪಡೆಗಳು ಸಂಪೂರ್ಣವಾಗಿ ಆಜ್ಞೆಯನ್ನು ಪಾಲಿಸಿದೆಯೋ ಇಲ್ಲವೋ, ಈ ರೀತಿಯಾದ ಸರಿಯಾದ ಪರಿಶೀಲನೆಗೆ ಎಡೆಮಾಡಿಕೊಡುತ್ತದೆ. ಈ ವ್ಯಾಪಾರ ಸಮೂಹದದಿಂದ ಬೆಂಬಲವು ಸಿಗದ ಕಾರಣ ಉಕ್ರೈನಿಯನ್ ರಾಷ್ಟ್ರಪತಿಯಾದ ಯನುಕೊವಿಚ್ ಅವರು ಈ ವರುಷದ ಫೆಬ್ರವರಿ ರಂತು ಅದಮ ಆಡಳಿತದ ನಂತರ ಓಡಿಹೋದರೆಂಬುದು ಸ್ಪಷ್ಟವಾಗಿದೆ. ಇಂತಹ ಘಟಣೆಗಳು ಸರಿಯಾಗಿ ಊಹಿಸುವವರಿದ್ದಲ್ಲಿ ಮೊದಲೆ ತಿಳಿಯಲು ಸಾಧ್ಯವಾಗುತ್ತದೆ.

ನೀತಿರಚನಾಕಾರರು ಈ ತಪಶೀಲಪಟ್ಟಿಯನ್ನು ನೋಡಿದ್ದಲ್ಲಿ 2011 ರ ಎರಡನೆ ಭಾಗದಲ್ಲಿ ಆಸಾಡ್ ರೆಜಿಮ್ ಸಿರಿಯಾದ ವಿರುದ್ಧ ನಾಗರೀಕ ಪ್ರತಿಭಟನೆಯನ್ನು ಗೆಲ್ಲಿಸಿರಬಹುದಾಗಿತ್ತು. ಸತತವಾದ ಸನ್ನಿ ಸಿಪ್ಪಾಯಿಗಳ ರಾಜನಿಷ್ಠೆಯ ಬದಲಾವಣೆಗಳನ್ನು ಹೊರತುಪಡಿಸಿ, ಇತರ ಸೇನೆಯ ಆಡಳಿತದ ಹೊರಗೆ ಜಯಕ್ಕೆ ಉತ್ತಮ ನಂಬುಗೆಯಾಗಿ ತೋರಲ್ಪಟ್ಟವು. ವ್ಯಾಪಾರ ಸಮೂಹದ ಸದಸ್ಯರ ಬೆಂಬಲಹಿಂದಕ್ಕೆ ಪಡೆದಿರುವುದು ಮತ್ತೊಂದು ಸೂಚನೆಯಾಗಿದೆ. ಇದರಡಿಯಲ್ಲಿ, ಮುಕ್ತ ಸಿರಿಯನ್ ಸೇನೆಯು 2012 ರ ಪ್ರಾರಂಭದಲ್ಲಿ,ಉಳಿದ ಆಸಾಡಿನ ಅಲ್ವೈಟ್ ಸೇನೆಯ ವಿರುದ್ಧ ಹೋರಾಡಲು ಪ್ರೋತ್ಸಾಹಿಸಲ್ಪಟ್ಟರು.

ಈ ತಪಶೀಲಪಟ್ಟಿಯು ನೀತಿಯನ್ನು ರಚಿಸಲು, ಪ್ರಜಾಶಕ್ತಿ ಅಭಿಯಾನಗಳಿಗೆ ಸಹಾಯಕಾರಿಯಾಗಿರುತ್ತದೆ. ಉದಾಹರಣೆಗೆ, ತಪಶೀಲಪಟ್ಟಿಯ ಮೊದಲ ಮೂರು ಸಾಮರ್ಥ್ಯಗಳು, ಜಾಣ್ಮೆಯಾಧಾರಿತ, ಮತ್ತು ಸದೃಢ ಮಾಹಿತಿ ಬದಲಾವಣೆಗಳ ಮೂಲಕ ಹೆಚ್ಚಿಸಲು ಸಾಧ್ಯವಾಗಿದೆ. ಮಾನವ ಹಕ್ಕುಗಳ ಕಾಯಿದೆ ರ ಅಡಿಯಲ್ಲಿ ವಿಶ್ವದ ಪ್ರಕಟನೆಯ ಪ್ರಕಾರ, ನಿರಂಕುಶಪ್ರಭುಗಳು ಮಾಹಿತಿಯ ಹರಿತವನ್ನು ತಮ್ಮ ಎಲ್ಲೆಗಳನ್ನು ದಾಟಿಹೋಗುವುದನ್ನು ತಡೆಗಟ್ಟಲಾರರು. ಅಥವಾ ಮಾಹಿತಿಗಳನ್ನು ಕೊಡುವ ಪ್ರಜೆಗಳನ್ನು ದಂಡಿಸಲಾರರು. ತಪಶೀಲಪಟ್ಟಿಯಲ್ಲಿ ಕಂಡುಬರುವ ಆರು ವಸ್ತುಗಳು ತಂತ್ರಜ್ಞಾನದ ಬಗ್ಗೆ ಆಲೋಚನೆಗಳನ್ನು ಹುಟ್ಟುಹಾಕಲು ಮೂರು ಸಾಮರ್ಥ್ಯ ಮತ್ತು ಪ್ರವೃತ್ತಿಗಳನ್ನು ಬೆಳೆಸಲು ಸಹಕಾರಿಯಾಗಿದೆ.

## ನಮ್ಮ ಭವಿಷ್ಯವನ್ನು ರೂಪಿಸುವ ತಪಶೀಲಪಟ್ಟಿ ಹಾಗೂ ಬಡಿದಾಟಗಳು

ಅಹಿಂಸಾ ಬಡಿದಾಟಗಳು ನಡೆಯುವ ಪರಿಸರಗಳು ಬಹಳ ಕ್ಲಿಷ್ಟವಾದುದು. ಮತ್ತು ನಾಗರೀಕ ಪ್ರತಿಭಟನಾಕಾರರಿಗೆ, ಆಧಾರವಾದ ಸಹಕಾರಗಳು ಮತ್ತು ಗೆಲ್ಲುವ ತಂತ್ರಗಳು ಬೇಕಾಗುತ್ತವೆ. ಇಲ್ಲವಾದಾಗ ಅವರು ಒಗ್ಗಟ್ಟನ್ನು ಕಳೆದುಕೊಳ್ಳುವಂತೆ ಭಾಸವಾಗುತ್ತದೆ. ಜನರ ಬದುಕಿನೊಂದಿಗೆ ತಪ್ಪಾದ ನಿರ್ಧಾರವನ್ನು ಕೈಗೊಳ್ಳುವ ಅವರ ನೈಸರ್ಗಿಕ ಹೆದರಿಕೆಗಳು, ನಿರಂಕುಶಪ್ರಭುವು ಎದುರು ನೋಡುತ್ತಿರುವ ಸಂದಿಗ್ಧ ವಾತಾವರಣವನ್ನು ಸೃಷ್ಟಿಸುತ್ತದೆ.

ಈ ತಪಶೀಲಪಟ್ಟಿಯು ಅಶಿಸ್ತನ್ನು ಬಿಟ್ಟು ಮುನ್ನುಗ್ಗಲು ಸಹಾಯವಾಗುತ್ತದೆ. ಕೆಲವರು ಹೀಗೆ ವಾದಿಸಬಹುದು; ಎಷ್ಟೋ ವಿಷಯಗಳಿರುವಾಗ ಜುಲುಮೆಯನ್ನು ಕೊನೆಗಾಣಿಸಲಿರುವ ತಪಶೀಲಪಟ್ಟಿಯು ತುಂಬ ಚಿಕ್ಕದಾಗಿದೆ; ಮುಂದ ಬರುವ ಘರ್ಷಣೆಗಳನ್ನು ಪರಿಶೀಲನೆ ಮಾಡಲು ಇನ್ನೂ ಅನೇಕ ಅಂಶಗಳು ಬೇಕಾಗುತ್ತದೆ; ಆಯಾ ಸ್ಥಳ ಮತ್ತು ಕಾಲಕ್ಕನುಗುಣವಾಗಿ ಭವಿಷ್ಯದಲ್ಲಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಬಹುಮುಖ್ಯ.

ಒಂದು ಸಂದರ್ಭದಲ್ಲಿನ ಪ್ರತ್ಯೇಕ ಅಂಶಗಳನ್ನು ಈ ತಪಶೀಲಪಟ್ಟಿಯಲ್ಲಿ ಪರಿಗಣಿಸಿಲ್ಲ. ಆದರೆ ಈ ತತ್ವಗಳನ್ನು ದೂರದೃಷ್ಟಿಯಿಂದ ಅರ್ಥಮಾಡಿಕೊಳ್ಳುವಂತೆ ನೀಡಲಾಗಿದೆ. ಇದರಿಂದ ಹೇಗೆ ಮತ್ತು ಏಕೆ ನಾಗರೀಕ ಪ್ರತಿಭಟನಾ ಅಭಿಯಾನಗಳು ಗೆಲ್ಲುತ್ತವೆಯೆಂದು ಅರ್ಥವಾಗುತ್ತದೆ. ಅತುಲ್ ಗವಾನ್ಡೆರವರು, ಈ ತಪಶೀಲಪಟ್ಟಿಯನ್ನು ವಿವಿಧ ಅಂಶಗಳಲ್ಲಿ ಪರಿಶೀಲಿಸಿದ್ದಾರೆ. ಅವರು ಬರೆದುರುವುದು:

© 2014 Peter Ackerman and Hardy Merriman

> ಈ ತಪಶೀಲಪಟ್ಟಿಯು ಎಲ್ಲರನ್ನು ರಕ್ಷಿಸುವಂತೆ, ಅನುಭವಯುತರಾದವರನ್ನೂ, ಅನೇಕ ಸೋಲುಗಳಿಂದ ವಿವಿಧ ಬಗೆಯ ಚಟುವಟಿಕೆಗಳಲ್ಲಿ ತೋರುತ್ತದೆ. ಇವು ಸಜಾತಿಯಜಾಲವನ್ನು ಒದಗಿಸುತ್ತದೆ. ನಮ್ಮೆಲ್ಲರಲ್ಲಿರುವ ಮಾನಸಿಕ ಕೊರತೆಗಳನ್ನು ಹಿಡಿಯುತ್ತದೆ- ನೆನಪಿನ ಶಕ್ತಿಯ ಕೊರತೆ ಮತ್ತು ಗಮನ ಮತ್ತು ಸಂಪೂರ್ಣವಾಗಿ.[19]
>
> ಅತ್ಯಂತ ಕ್ಲಿಷ್ಟಕರವಾದ ಪರಿಸ್ಥಿತಿಯಲ್ಲಿ, - ಎಲ್ಲಿ ಒಬ್ಬ ವ್ಯಕ್ತಿಗಿರುವುದಕ್ಕಿಂತ ಹೆಚ್ಚು ಜ್ಞಾನದ ಅಗತ್ಯವಿದೆಯೋ, ಮತ್ತು ಊಹಿಸಲಸಾಧ್ಯವಾಗಿದೆಯೋ... ಒಬ್ಬ ಮೂಢನಿಗೂ ಪರಿಣಾಮಕಾರಿ ತಪಶೀಲಪಟ್ಟಿ. ಆದರೆ ಅತ್ಯಂತ ಅವಶ್ಯಕವಾದ ಅಂಶಗಳನ್ನು ಅದು ಬಿಟ್ಟಿಲ್ಲ. ಮತ್ತು ಎಲ್ಲಾ ಜನರು ಮಾತನಾಡಿ ಕೆಲಸಮಾಡುವ ರೀತಿಯಲ್ಲಿದೆ. ಅವರಿಗೆ ತಿಳಿದ ಉತ್ತಮ ರೀತಿಯಲ್ಲಿ ಪರಿಸ್ಥಿತಿ ಮತ್ತು ಊಹಿಸಲಾಗದ ಅಂಶಗಳನ್ನು ನಿರ್ವಹಿಸಲು ಸಹಕಾರಿಯಾಗಿದೆ.[20]

ಈ ತಪಶೀಲಪಟ್ಟಿಯು ಯಾರು ಜಯಗಳಿಸುತ್ತಾರೆ ಎಂಬುದಕ್ಕೆ ಕೊನೆಯ ಸೂಚನೆಯಲ್ಲಿ; ನಿರಂಕುಶಪ್ರಭುಗಳು ಅಥವಾ ನಾಗರೀಕ ಪ್ರತಿಭಟನಾಕಾರರು. ಹಾಗಿದ್ದರು, ತಪಶೀಲಪಟ್ಟಿಯು ಅತ್ಯಗತ್ಯ ಹಾಗೂ ಸತತವಾಗಿ ಸೂಚಕವಾಗಿ ಕೆಲಸಮಾಡುತ್ತದೆ; ಹೇಗೆ ಪ್ರಜೆಗಳ ಸ್ವತಂತ್ರವಾಗುವ ಬೇಡಿಕೆಯು ಅಧಿಕಾರವರ್ಗದ ಪದ್ಧತಿಗಳನ್ನು ಸದೆಬಡಿಯುತ್ತದೆ.

© 2014 Peter Ackerman and Hardy Merriman

## ಕೊನೆಯ ಸೂಚನೆಗಳು

[1] 1900 ಮತ್ತು 2006 ರ ನಡುವಿನ, 105 ನಾಗರೀಕ ಪ್ರತಿಭಟನಾ ಅಭಿಯಾನಗಳನ್ನು, ವಿಶ್ವದಾದ್ಯಂತ ದೇಶಗಳಲ್ಲಿ ಮತ್ತು ರಾಜ್ಯಗಳಲ್ಲಿ ಸರ್ಕಾರದ ಬದಲಾವಣೆಗಾಗಿ ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟೀಫನ್ ರವರ ಸಂಶೋಧನೆಯ ಆಧಾರ.

ಚೆನೊವೆತ್, ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟೀಫನ್, 2011. *ವೈ ಸಿವಿಲ್ ರೆಸಿಸ್ಟನ್ಸ್ ವರ್ಕ್ಸ್: ದಿ ಸ್ಟ್ರಾಟಜಿಕ್ ಲೊಜಿಕ್ ಆಫ್ ನಾನ್ವಯಲನ್ಟ್ ಕಾನ್ಫ್ಲಿಕ್ಟ್.* ನ್ಯೂಯಾರ್ಕ್: ಕೊಲಮ್ಬಿಯಾ ವಿಶ್ವವಿದ್ಯಾಲಯ ಪ್ರೆಸ್ ಪುಟ 6.

ನಾವ್ಕೊ 1.1 ಮಾಹಿತಿಯು ಇದರಲ್ಲಿ ದೊರೆಯುತ್ತದೆ:
http://www.du.edu/korbel/sie/research/chenow_navco_data.html

[2] 67 ಪ್ರಜಾ ಪ್ರಭುತ್ವದ ಬದಲಾವಣೆಗಳ ಆಧಾರದ ಮೇಲೆ 1972- 2005 ರ ನಡುವೆ ಸಂಶೋಧನೆಯಲ್ಲಿ ಪರಿಶೀಲಿಸಿದೆ: ಹೌ ಫ್ರೀಡಮ್ ಇಸ್ ವೊನ್: ಫ್ರಮ್ ಸಿವಿಕ್ ರೆಸಿಸ್ಟನ್ಸ್ ಟು ಡ್ಯುರಬಲ್ ಡೆಮಾಕ್ರಸಿ. ಲೇಖಕನು ಕಂಡುಹಿಡಿದಿರುವುದು:

"ನಾಗರೀಕ ಪ್ರತಿಭಟನೆಯ ಶಕ್ತಿಯು 67 ರಲ್ಲಿ 50 ಬದಲಾವಣೆಗಳನ್ನು ಏರ್ಪಡಿಸುವುದರಲ್ಲಿ ಮುಖ್ಯಕಾರಣವಾಗಿದೆ. ಅಥವಾ ಶೇಕಡಾ 70ರಷ್ಟು ದೇಶಗಳಲ್ಲಿ ಬದಲಾವಣೆಗಳು ಪ್ರಾರಂಭವಾಗಿ, ಅಧಿಕಾರ ವರ್ಗಗಳು ಸೋತವು ಮತ್ತು /ಅಥವಾ ಅನೇಕ ರಾಜ್ಯಗಳಿಂದ ಹೊಸ ರಾಜ್ಯಗಳು ಹುಟ್ಟಿಗೊಂಡವು. ಆ 50 ದೇಶಗಳಲ್ಲಿ, (ನಾಗರೀಕ ಶಕ್ತಿಯಿಂದ ಮಾತ್ರ ಬದಲಾವಣೆಗಳು ಉಂಟಾದ ಅಥವಾ ಅಧಿಕಾರ ವರ್ಗದವರು ಮತ್ತು ಪ್ರಜಾಶಕ್ತಿ ಎರಡರಿಂದಲೂ ಮಿಶ್ರ ಬದಲಾವಣೆಗಳನ್ನು ಹೊಂದಿದ ದೇಶಗಳು) ಯಾವುದೂ ಸ್ವತಂತ್ರ ದೇಶಗಳಾಗಿರಲಿಲ್ಲ. 25 ದೇಶಗಳು ಭಾಗಶಹ ಸ್ವತಂತ್ರವಾಗಿದ್ದವು, 25 ದೇಶಗಳು ಸ್ವತಂತ್ರವಾಗಿಲ್ಲ. ಈಗ 2005 ರಲ್ಲಿ 32 ದೇಶಗಳು ಸ್ವತಂತ್ರವಾಗಿವೆ. 14 ದೇಶಗಳು ಭಾಹಶಹ ಸ್ವತಂತ್ರವಾದವು, 4 ಮಾತ್ರ ಸ್ವತಂತ್ರವಾಗಿಲ್ಲ. "

ಅಕೆರ್ಮನ್, ಪೀಟರ್, ಮತ್ತು ಅಡ್ರಿಅನ್ ಕರಟ್ನೆಕಿ, 2005, ಹೌ ಫ್ರೀಡಮ್ ಇಸ್ ವೊನ್: ಫ್ರಮ್ ಸಿವಿಕ್ ರೆಸಿಸ್ಟನ್ಸ್ ಟು ಡ್ಯುರಬಲ್ ಡೆಮಾಕ್ರಸಿ. ವಾಶಿಂಟನ್, ಡಿಸಿ: ಫ್ರೀಡಮ್ ಹೌಸ್ ಪುಟ 6-7

[3] ಮರ್ಚನ್ಟ್, ಎಲಿನೊರ್, ಅಡ್ರಿಅನ್ ಕರಟ್ನಿಕಿ, ಆರ್ಚ್ ಪುಡ್ಡಿಂಗ್ಟನ್, ಮತ್ತು ಕ್ರಿಸ್ಟೋಫರ್ ವಾಲ್ಟರ್ 2008. ಎನೆಬ್ಲಿಂಗ್ ಎನ್ವಿರನ್ಮೆಂಟ್ ಫಾರ್ ಸಿವಿಕ್ ಮೂವ್ಮೆನ್ಟ್ಸ್ ಗಳು ಮತ್ತು ದಿ ಡೈನಮಿಕ್ಸ್ ಆಫ್ ಡೆಮೊಕ್ರಟಿಕ್ ಟ್ರಾನ್ಸಿಶನ್. ಫ್ರೀಡಮ್ ಹೌಸ್ ವಿಶೇಷ ವರದಿ ಜೂಲೈ 18. ಪುಟ 1.

© 2014 Peter Ackerman and Hardy Merriman

[4] ಐಬಿಐಡಿ ಪುಟ (*Ibid*. p. ) 1.

[5] ಚೆನೊವೆತ್, ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟೀಫನ್, 2011. ವೈ ಸಿವಿಲ್ ರೆಸಿಸ್ಟನ್ಸ್ ವರ್ಕ್ಸ್: ದಿ ಸ್ಟ್ರಾಟಜಿಕ್ ಲೊಜಿಕ್ ಆಫ್ ನಾನ್ವಯಲನ್ಟ್ ಕಾನ್ಫ್ಲಿಕ್ಟ್. ನ್ಯೂಯಾರ್ಕ್: ಕೊಲಮ್ಬಿಯಾ ವಿಶ್ವವಿದ್ಯಾಲಯ ಪ್ರೆಸ್ ಪುಟ 6.

[6] ಐಬಿಐಡಿ ಪುಟ (*Ibid*. p.) 9.

[7] ಐಬಿಐಡಿ ಪುಟ (*Ibid*. p.) 68.

[8] ಐಬಿಐಡಿ ಪುಟ (*Ibid*. p.) 62.

[9] ಚೆನೊವೆತ್, ಎರಿಕಾ 2014 ಟ್ರೆನ್ಡ್ಸ್ ಇನ್ ಸಿವಿಲ್ ರೆಸಿಸ್ಟನ್ಸ್ ಮತ್ತು ಅಥಾರಿಟೆರಿಯನ್ ರೆಸ್ಪಾನ್ಸಸ್. ದಿ ಅಟ್ಲಾಂಟಿಕ್ ಕೌನ್ಸಿಲ್ ಫ್ಯೂಚರ್ ಆಫ್ ಅಥಾರಿಟೇರಿಯನಿಸಮ್ ಪ್ರಾಜೆಕ್ಟ್. ಏಪ್ರಿಲ್ 15.

[10] ಚೆನೊವೆತ್, ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟೀಫನ್, 2011. ವೈ ಸಿವಿಲ್ ರೆಸಿಸ್ಟನ್ಸ್ ವರ್ಕ್ಸ್: ದಿ ಸ್ಟ್ರಾಟಜಿಕ್ ಲೊಜಿಕ್ ಆಫ್ ನಾನ್ವಯಲನ್ಟ್ ಕಾನ್ಫ್ಲಿಕ್ಟ್. ನ್ಯೂಯಾರ್ಕ್: ಕೊಲಮ್ಬಿಯಾ ವಿಶ್ವವಿದ್ಯಾಲಯ ಪ್ರೆಸ್ ಪುಟ 66.

[11] ಥಾಮಸ್ ಸಿ. ಶೆಲ್ಲಿಂಗ್ 1968. "ಸಮ್ ಕ್ವಸ್ಚಿಯನ್ ಟು ಸಿವಿಲಿಯನ್ ಡಿಫೆನ್ಸ್", ಇನ್ ಆಡಮ್ ರಾಬರ್ಟ್ಸ್ ಎಡಿಶನ್, ಸಿವಿಲಿಯನ್ ರೆಸಿಸ್ಟನ್ಸ್ ಅಸ್ ಎ ನ್ಯಾಷನಲ್ ಡಿಫೆನ್ಸ್: ನಾನ್-ವಯಲಂಟ್ ಆಕ್ಶನ್ ಅಗೈನ್ಸ್ಟ್ ಅಗ್ರೆಶನ್. ಹಾರಿಸ್ಬರ್ಗ್, ಪಿಎ: ಸ್ಟಾಕ್ಪೋಲ್ ಬುಕ್ಸ್ ಪುಟ 304.

[12] ಅಕೆರ್ಮನ್, ಪೀಟರ್ ಮತ್ತು ಜಾಕ್ ಡುವಲ್. 2000. ಎ ಫೋರ್ಸ್ ಮೋರ್ ಪವರ್ಫುಲ್: ಎ ಸೆಂಚುರಿ ಆಫ್ ನಾನ್ವಯಲನ್ಟ್ ಕಾನ್ಫ್ಲಿಕ್ಟ್. ಲಂಡನ್: ಸಂತ ಮಾರ್ಟಿನ್ರವರ ಮುದ್ರಣಾಲಯ/ ಪಾಲ್ಗ್ರೆವ್ ಮಾಕ್ಮಿಲ್ಲನ್ ಪಿಪಿ. 113–174.

[13] ಚೆನೊವೆತ್, ಎರಿಕಾ ಚೆನೊವೆತ್ ಮತ್ತು ಮರಿಯಾ ಸ್ಟೀಫನ್, 2011. ವೈ ಸಿವಿಲ್ ರೆಸಿಸ್ಟನ್ಸ್ ವರ್ಕ್ಸ್: ದಿ ಸ್ಟ್ರಾಟಜಿಕ್ ಲೊಜಿಕ್ ಆಫ್ ನಾನ್ವಯಲನ್ಟ್ ಕಾನ್ಫ್ಲಿಕ್ಟ್. ನ್ಯೂಯಾರ್ಕ್: ಕೊಲಮ್ಬಿಯಾ ವಿಶ್ವವಿದ್ಯಾಲಯ ಪ್ರೆಸ್ ಪುಟ 30–61.

[14] ಐಬಿಐಡಿ ಪುಟ (*Ibid*. p.) 30– 61

[15] ಐಬಿಐಡಿ ಪುಟ (*Ibid*. p.) 46– 49.

[16] ಎ ಫೋರ್ಸ್ ಮೋರ್ ಪವರ್ಫುಲ್. ಡೈರಕ್ಟರ್. ಸ್ಟೀವ್ ಯಾರ್ಕ್, ಯಾರ್ಕ್ ಝಿಮ್ಮೆರ್ಮನ್ 2000 ಸಿನಿಮಾ.

[17] ಬಿನ್ನಡಿಕ್, ಅನಿಕಾ ಲೊಕೆ, ಮತ್ತು ಇವನ್ ಮರೊವಿಕ್ 2006. ಪವನ್ ಮತ್ತು ಪರ್ಸುಯೆಶನ್: ನಾನ್ವಯಲನ್ಸ್ ಸ್ಟ್ರಾಟಜೀಸ್ ಟು ಇನ್ಫ್ಲುಯನ್ಸ್ ಸ್ಟೇಟ್ ಸೆಕ್ಯೂರಿಟಿ ಫೋರ್ಸಸ್ ಇನ್ ಸರ್ಬಿಯ(2000) ಮತ್ತು ಉಕ್ರೈನ್ (2004). ಕಮ್ಯೂನಿಸ್ಟ್ ಅಂಡ್ ಪೊಸ್ಟ್- ಕಮ್ಯೂನಿಸ್ಟ್ ಸ್ಟಡೀಸ್ 39, ಸಂಖ್ಯೆ 3 (ಸೆಪ್ಟಂಬರ್) ಪುಟಗಳು 411–429.

[18] ನೆಬೊಜ್ಸ ಕೊವಿಕ್ ರವರೊಂದಿಗೆ ಮುಖಾಮುಖಿ ಸಂದರ್ಶನ, ವೆಸೆರ್ನ್ಜಿ ನೊವೊಸ್ಟಿ, ಅಕ್ಟೋಬರ್ 2, 2010.

[19] ಗವಾನ್ಡೆ, ಅತುಲ್, 2009. ದಿ ಚೆಕ್ಲಿಸ್ಟ್ ಮನೆಫೆಸ್ಟೊ: ಹೌ ಟು ಗೆಟ್ ತಿಂಗ್ಸ್ ರೈಟ್. ನ್ಯೂಯಾರ್ಕ್: ಪಿಕಡರ್ ಪುಟ. 47.

[20] ಐಬಿಐಡಿ ಪುಟ (*Ibid*. p.) 79.